Mysore Village Panchayats and Local Boards (Amendment) Bill, 1969

(Introduction)

Sri B. L. GOWDA (Deputy Minister for Co-operation).—Sir, I beg to introduce the Mysore Village Panchayats and Local Boards (Amendment) Bill, 1969, 1969.

Mr. SPEAKER.—The Bill is introduced.

Mysore Irrigation (Levy of Betterment Contribution and Water Rate) (Amendment) Bill, 1969)

(Introduction)

Sri D. PARMESWARAPPA (Deputy Minister for Major Irrigation).—Sir, I beg to introduce the Mysore Irrigation (Levy of Betterment Contribution and Water Rate) (Amendment) Bill, 1969.

Mr. SPEAKER.—The Bill is introduced.

Mysore Public Premises (Eviction of Unauthorised Occupants) (Amendment) Bill 1969

(Introduction.)

Sri H. V. KOUJALGI (Minister for Revenue).—Sir, I beg to introduce the Mysore Public Premises (Eviction of Unauthorised Occupants) (Amendment) Bill, 1969.

Mr. SPEAKER.—The Bill is introduced.

Mysore Land Revenue (Second Amendment) Bill, 1969

(Introduction)

Sri H. V. KOUJALGI.—Sir, I beg to introduce the Mysore Land Revenue (Second Amendment) Bill, 1969.

Mr. SPEAKER.—The Bill is introduced.

Mysore Appropriation (No. 4) Bill, 1969

(Introducction)

Sri K. PUTTASWAMY (Minister for Law, Labour and Parliamentary Affairs).—On behalf of the Hon. Finance Minister, Sir, I beg to introduce the Mysore Appropriation (No. 4) Bill, 1969.

Mr. SPEAKER.—The Bill is introduced.

Mysore Appropriation (No. 4) Bill, 1969

Motion to Consider

Sri K. PUTTASWAMY.—Sir, I beg to move :

"That the Mysore Appropriation (No. 4) Bill, 1969 be taken into consideration."

Mr. SPEAKER.—Motion Moved :

"That the Mysore Appropriation (No. 4) Bill, 1969 be taken into consideration."

† Sri K. PUTTASWAMY.—Sir, the House has debated these Demands for two days and the Hon. Finance Minister has given convincing reply. So, I request the House to take this Bill into consideration.

Mr. SPEAKER.—The question is :

"That the Mysore Appropriation (No. 4) Bill, 1969 be take into consideration."

The motion was adopted.

Mr. SPEAKER.—The question is :

"That clauses 2 and 3, do stand part of the Bill."

The motion was adopted.

Clauses 2 and 3, were added to the Bill.

Mr. SPEAKER.—The question is :

"That the Schedule, Clause 1, the Long Title and Enacting formula do stand part of the Bill."

The motion woas adopted.

Schedule, Clause 1, the Long Title and Enacting formula were added to the Bill.

Motion to pass

Sri K. PUTTASWAMY.—I move :

"That the Mysore Appropriation (No. 4) Bill, 1969, be passed."

Mr. SPEAKER.—The question is :

"That the Mysore Appropriation (No. 4) Bill, 1969, be passed."

The House divided.

Mr. SPEAKER.—The result of the Division is :

Ayes : 76
Noes : 52

The " Ayes" have it.

The motion was adopted.

Formation of a Committee for Scheduled Castes and Schedule Tribes

Sri J. P. SARWESH (Serum).—Sir, some days back it was announced by the Government that the Cabinet has taken a decision to appoint a Committee of Legislators to go into the problems of Scheduled Castes and Schedule Tribes. As the Chief Minister is here in the House I request through you that this Committee may be constituted before the present session of the House adjourns.

Sri AZEEZ SAIT.—Sir, you just now announced the result of the Division as 76 for Ayes and 52 for Noes. You failed to say that one member was neutral as he kept on sitting without voting either for Ayes or for Noes.

Mr. SPEAKER.—It is not necessary that he should vote. Rules do not say so.

Notice of Privilege Motion given by Sri R. M. Hegde

(Contd.)

ಶ್ರೀ ವಾಟಾಳ್ ನಾಗರಾಜ್.—ಶ್ರೀ ಹೆಗಡೆಯವರು ಶ್ರೀ ಗೋಪಾಲಗೌಡರಮೇಲೆ ತಂದಿರುವ ಹಕ್ಕುಭಾದ್ಯತೆ ನಿರ್ಣಯದ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ ಅದನ್ನು ತಿಳಿಸಲು ಅವಕಾಶಮಾಡಿಕೊಡಬೇಕು.

Mr. SPEAKER.—It is for the hon. Member to say. Now the House is seized of the matter. I am not calling upon any hon Member, but it is for the hon. Member to stand up and say. Even then the question will have to be put to the. House for leave to withdraw the motion and if the House grants leave he can withdraw.

ಶ್ರೀ ಆರ್. ಎಂ. ಹೆಗಡೆ.—ಮಾನ್ಯ ಸಭಾಪತಿಗಳೇ, ನಾನು ಹೊರಗೆ ಹೋಗಿ ರಾಜಿಯಲ್ಲಿ ನನ್ನ ಮಿತ್ರರ ಸಂಗಡ ಮಾತನಾಡಿ ಒಂದು ನಿರ್ಣಯಕ್ಕೆ ಬಂದಿದ್ದೇನೆ. ಶ್ರೀ ಗೋಪಾಲಗೌಡರೂ ನಾನೂ ಭೇಟಿಯಾಗಿ ಒಂದು ತೀರ್ಮಾನಕ್ಕೆ ಬಂದಿರುವಂತೆ ನಾನು ಕೊಟ್ಟಿರುವ ಮೋಷನ್ನನು ನಾನು ಪ್ರೆಸ್‌ಮಾಡುವುದಿಲ್ಲ. ಅದನ್ನು ವಾಪಸು ಪಡೆಯಲು ಅನುಮತಿ ಬೇಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ನಾನೊಂದು ಮನವಿಮಾಡುತ್ತೇನೆ. ಈಗಾಗಲೇ ಸರ್ವೇಶ್ವರರು ತಿಳಿಸಿದ್ದಾರೆ. ಮುಖ್ಯ ಮಂತ್ರಿಗಳಿದ್ದಾರೆ, ಸರಕಾರ ಒಂದು ತೀರ್ಮಾನ ಮಾಡಿದೆ, 20 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ನಿಮ್ನವರ್ಗಕ್ಕೆ ಆಗಿರುವ ಅನುಕೂಲ ಮತ್ತು ಅನಾನುಕೂಲ ವಿಮರ್ಶೆಮಾಡಲು ಒಂದು ಸಮಿತಿಮಾಡಲು ರಾಜ್ಯ ಸರಕಾರ ಆರ್ಡರ್ ಮಾಡಿರುವುದರಿಂದ ಪ್ರಕಟವಾಗಿದೆ. ಸುಮಾರು ಎಂಟು ದಿವಸಗಳಲ್ಲಿ ಸಮಿತಿ ರಚಿಸುವುದಾಗಿ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ. ಆ ವಿಚಾರದಲ್ಲಿ ಒಂದು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

4-30 P.M.

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—ಅಧ್ಯಕ್ಷರೇ, ಈ ಪೆಡ್ಯೂರ್ ಕ್ಯಾನ್ಸ್ ಮತ್ತು ಟ್ರೈಬ್ಯೂನ ಬಗ್ಗೆ ಈ ಮನೆಯ ಮತ್ತು ಮೇಲ್ಮನೆಯ ಕೆಲವು ಸದಸ್ಯರು ಒಂದು ಕಮಿಟಿ ಆಗಬೇಕೆಂದು ಅನ್ನುವಂತಹ ಒಂದು ನಿರ್ಣಯ ಮಾಡಿದ್ದೇವೆ. ಆ ಕಮಿಟಿ ಎಷ್ಟು ಜಾಗ್ರತೆ ಆದರೆ ಅಷ್ಟೂ ನಮಗೆ ಸಂತೋಷವಾಗುತ್ತದೆ. ನಾವು ಆ ಕಮಿಟಿ ಮಾಡಬೇಕಾದರೆ ರೂಲ್ಸ್ ಅಮೆಂಡ್ ಮಾಡಬೇಕಾಗಿದೆ ಎಂಬ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಆ ರೀತಿ ಮಾಡಬೇಕಾದರೆ ರೂಲ್ಸ್ ಅಮೆಂಡ್ ಮಾಡಿಯೇ ಮಾಡಬೇಕಾಗುತ್ತದೆ. ಇಲ್ಲ ಮತ್ತ ಯಾವುದೇ ರೀತಿಯಿಂದ ಮಾಡುವುದಕ್ಕೆ ಸಾಧ್ಯವಿದ್ದರೆ ಆ ರೀತಿಯಿಂದ ಮಾಡುವುದಕ್ಕೆ ವಿಚಾರ ಮಾಡುತ್ತೇವೆ. ಈ ಮಾನ್ಯ ಸಭೆಗೆ ಸ್ಪಷ್ಟವಾಗಿ ಹೇಳುವಂತಹದು ಏನೆಂದರೆ ನಾವು ಯಾವ ರೀತಿಯಿಂದ ನಿರ್ಣಯ ಮಾಡಿದ್ದೇವೆ ಅದನ್ನು ಕಾರ್ಯರೂಪಕ್ಕೆ ತರಬೇಕೆಂಬ ಆತುರತೆ ನಿಜವಾಗಿಯೂ ಇದೆ, ಮುಂದೆ ಹಾಕಬೇಕೆಂದು ಇಲ್ಲ. ಅದರ ಬಗ್ಗೆ ಪರಿಶೀಲನೆ ಮಾಡಿಸುತ್ತಾ ಇದ್ದೇನೆ. ರೂಲ್ಸ್ ಅಮೆಂಡ್ ಮಾಡಬೇಕಾದರೆ ಮಾಡೋಣ, ಮತ್ತ ಯಾವುದಾದರೂ ರೀತಿಯಿಂದ ಮಾಡುವುದಕ್ಕೆ ಸಾಧ್ಯವಾದರೆ ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡೋಣ.

General Discussion on the Annual Financial Statement of the M.S.E.B. for 1969-70

Sri D. PARAMESHWARAPPA.—(Deputy Minister for Major Irrigation and Electricity) : Sir, I beg to move :

"That the Annual Financial Statement of the Mysore State Electriccity Board for the year 1969-70 laid on the table of the House on 1st April 1969 be taken into consideration."

Mr. SPEAKER.—Motion moved :—

"That the Annual Financial Statement of the Mysore State Electricity Board for the year 1969-70 laid on the Table of the House on 1st April 1969 be taken into consideration."

Sri M. NAGAPPA.—Sir, I have sent a substituted motion under Rule 279, and I may be permitted to move that motion.

Mr. SPEAKER. – Yes.

Sri M. NAGAPPA.—Sir, I move :

"That this House expresses its deep concern over the imposition of surcharge from 13th April 1969 and requests the Board to revise its decision."

Mr. SPEAKER.—Motion moved :

"That this House expresses its deep concern over the imposition of surcharge from 13th April 1969 and requests the Board to revise its decision."

(MR. DEPUTY SPEAKER in the Chair)

Sri H. N. NANJE GOWDA.—I want a clarification, Sir. ಈ ಅನ್ಯುಯರ್ ಫೈನಾನ್‌ಷಿಯಲ್ ಸ್ಟೇಟ್‌ಮೆಂಟನ್ನು ಫಸ್ಟ್ ಏಪ್ರಿಲ್ 1969ರಲ್ಲಿ ಈ ಸಭೆಯ ಮುಂದೆ ಮುಂಡಿಸ ರಾಯಿತು, ತದನಂತರ ಅಂದರೆ ಏಪ್ರಿಲ್ 13ರಂದು ಟ್ಯಾರಿಫ್ ರೇಟ್ ರಿವೈಸ್ ಮಾಡಿ ಒಂದು ಹುಕುಂನ್ನು ವಿದ್ಯುಚ್ಛಕ್ತಿ ಮಂಡಲಯವರು ಹೊರಡಿಸಿದರು. ಅದರ ಪರಿಣಾಮ ಏನು ಎಂಬುದು ನಮಗೆ ಆಗ ಗೊತ್ತಾಗಲಿಲ್ಲ. ಅದರಿಂದ ಏರಿಕೆಯಾದಂತಹ ಹಣ ಎಷ್ಟು? ಅದರಿಂದ ಅವರು ಕೈಗೊಳ್ಳಬಹುದಾದಂತಹ ಅಭಿವೃದ್ಧಿ ಕಾರ್ಯಕ್ರಮಗಳೇನು ಎಂಬ ಮುಂತಾದ ವಿಷಯಗಳನ್ನು ವಿವರವಾಗಿ ಈ ಸಭೆಯ ಮುಂದೆ ಮುಖ್ಯಮಂತ್ರಿಗಳು ಮುಂಡಿಸಲಿಲ್ಲ. Hence it would not be in order to discuss this Financial Statement of the Electricity Board, which was laid on the Table of the House on 1st April 1969. Therefore, I request you, Sir, to direct the Chief Minister or the other Minister to place a modified Financial Statement with details as to what is the effect of the rise in tariff rates, what is the increase on the receipt side, the actual expenditure, and how do they propose to utilise the extra amount they are getting, etc. We may take up the discussion tomorrow after having all the records. That is my objection.

Mr. DEPUTY SPEAKER.—You wanted only a clarification.

Sri H. N. NANJE GOWDA.—Clarification as well as it is my objection.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿದೆ, ಅನ್ಯುಯರ್ ಫೈನಾನ್‌ಷಿಯರ್ ಸ್ಟೇಟ್‌ಮೆಂಟ್ ಈ ಸಭೆಯಲ್ಲಿ ಚರ್ಚೆಗೆ ಬರುತ್ತದೆ ನಿಜ, ಆದರೆ ಪೊಟಿಂಗಿಗೆ ಬರುವುದಿಲ್ಲ. ರೂಲ್ಸ್ ಪ್ರಕಾರ ಅವರು ಪ್ರತಿವರ್ಷ ಈ ಸಭೆಯ ಮುಂದೆ ಇಡಬೇಕಾದ್ದು ಅವರ ಕರ್ತವ್ಯ ಆ ಪ್ರಕಾರ ಇಟ್ಟಿದ್ದಾರೆ. ತಮ್ಮ ಅಭಿಪ್ರಾಯಗಳನ್ನು ಅವರು ಗಮನಕ್ಕೆ ತಗೆದುಕೊಳ್ಳುತ್ತಾರೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಟ್ಯಾರಿಫ್ ಹೆಚ್ಚು ಮಾಡಿದ್ದರಿಂದ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ಸಭೆಗೆ ತಿಳಿಸಿದರೆ ಅನುಕೂಲವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಚರ್ಚೆ ಪ್ರಾರಂಭ ಮಾಡಿ, ವಿಚಾರಗಳನ್ನು ವ್ಯಕ್ತಮಾಡಿ ಆದನ್ನೆಲ್ಲಾ ರಿಪ್ಲೈನಲ್ಲಿ ಹೇಳುತ್ತೇನೆ. ಮೊದಲೇ ರಿಪ್ಲೈಮಾಡಿ ಮುಗಿಸಿ ಅನಂತರ ಚರ್ಚೆ ಮಾಡುತ್ತೇವೆ ಎಂದರೆ ಅದು ಆಗುವುದಿಲ್ಲ. ತಾವು ತಮ್ಮ ಅಭಿಪ್ರಾಯಗಳನ್ನು ಸೂಚಿಸಬಹುದು, ಅದಕ್ಕೆ ಕೊನೆಯಲ್ಲಿ ಉತ್ತರ ಹೇಳುತ್ತೇನೆ.

Sri H. N. NANJE GOWDA.—We have to discuss the Financial Statement of the Electricity Board The Hon. Chief Minister is saying that we are not here to pass it. I am not entering into the technical details. The Financial Statement was laid on the Table of the House on 1st April 1969, and after 13 days the tariff rates were increased. We do

not know the implications ; we do not know the compelling reasons for the increase ; we do not know what is the increase on the receipt side. Let the Hon. Chief Minister explain the details as an introductory talk. Let us know whether the Electricity Board has examined all these aspects before rising the rates. Without all this information, we are left in darkness.

ಶ್ರೀ ಎಚ್. ಬಿ. ಜ್ವಾಲನಯ್ಯ.—ಟ್ಯಾರಿಫ್ ರೇಟ್ ಹೆಚ್ಚು ಮಾಡಿದ ಮೇರೆ ರಸೀಜ್ ಸ್ಟೈಡ್ ಮತ್ತು ಎಕ್ಸ್‌ಪೆಂಡೀಚರ್ ಸೈಡ್‌ನಲ್ಲಿ ಯಾವ ರೀತಿ ಪರಿಣಾಮವಾಗುತ್ತದೆ ಎಂಬುದನ್ನು ತಾವು ಹೇಳಬೇಕು, ಅದನ್ನು ತಿಳಿದುಕೊಳ್ಳದೇ ಚರ್ಚೆಮಾಡುತ್ತಾ ಹೋದರೆ ಚರ್ಚೆ ಸಂಪೂರ್ಣವಾಗುವುದಿಲ್ಲ.

Sri H. N. NANJE GOWDA.—Sir, I would like to bring to your kind notice that there was not even a hint about the increase in tariff rates in the Financial Statement when it was placed on the Table of the House on 1st April 1969. This House is interested to know as to what prompted them to raise the rates within a span of 13 days.

Sri S. SIVAPPA.—Sir, according to the rules of the Electricity Board, the Budget of the Electricty Board will be prepared in the form prescribed in the rules, and that has to be submitted to the Government before the end of every year as per section 61 of the Electricity Supply Rules, 1958 for being laid before the House. The budget of the Board has to give a clear picture of the budgetary state of affairs of the Board which includes the receipts and revenues of the Board. Unless we know the exact revenues of the Electricity Board for that particular year, there would be no use in discussing the financial statement of the Electricity Board. Therefore we would like to know what exactly is the anticipated revenue and anticipated expenditure of the Electricity Board for the year 1969-70.

Sri VEERENDRA PATIL.—The Financial Statement that has been placed on the table of the House and which is going to be discussed, now consists of all the information. The only information that the hon. Members want to know is in regard to the increase in the tariff so far as I. P. sets servicing is concerned. After it was submitted the Government there has been increase in the tariff so far as I .P. sets servicing is concerned. I know most of the hon. Members would deal with that point and I will be in a position to reply, to all the points that would arise during the course of discussions. Hon. members know that on the rural electrification programmes the Electricity Board is incurring heavy losses and these programmes are not at all remunerative. In order to make good some losses they have increased the tariff rates. The amount of revenue that would accrue due to this increase might be hardly 20 or 22 lakhs of rupees. I will note down all the points that would be raised by the hon. Members and at the end I will be in a position to give effective replies to those points.

Sri H. B. JWALANAIAH.—We want to now the total revenue that would come to the Electricity Board.

Sri VEERENDRA PATIL.—I have not said anything about the total revnues. I have only stated about the revenue that might come to the Electricity Board due to the minimum increase in the tariff of I. P. Sets which may not be more than 20 to 22 lakhs of rupees.

ಶ್ರೀ ಬಿ. ಭಾನ್ಮರ ಶೆಟ್ಟಿ.—ಈಗತಾನೆ ಮಾನ್ಯ ಮುಖ್ಯ ಮಂತ್ರಿಗಳು ರಾಜ್ಯದಲ್ಲಿ 97 ಸಾವಿರ ಐ. ಪಿ. ಸೆಟ್ಸ್ ಇವೆ ಎಂದು ಹೇಳಿದರು. ಅಂದರೆ ಅಂದಾಜು ಒಂದು ಲಕ್ಷ ಐ. ಪಿ. ಸೆಟ್ಸ್ ಎಂದು ಇಟ್ಟುಕೊಂಡರೆ ಒಂದೊಂದು ಐ. ಪಿ. ಸೆಟ್ಟಿಗೂ 4 ಎಚ್. ಪಿ. ಪ್ರಕಾರ ಲೆಕ್ಕ ಹಾಕಿದರೂ ಅಲ್ಲಿಗೆ 4 ಲಕ್ಷ ಹಾರ್ಸ್‌ಪವರ್ ವಿದ್ಯುಚ್ಛಕ್ತಿ ಆಯಿತು. ಒಂದು ಹಾರ್ಸ್ ಪವರ್‌ಗೆ ಒಂದು ರೂಪಾಯಿನಂತೆ ಆದರೂ 4 ಲಕ್ಷ ರೂಪಾಯಿಗಳಾಯಿತಲ್ಲವೇ ?

Mr. DEPUTY SPEAKER.—It is for discussion.

Sri H. N. NANJE GOWDA.—I had given notice of a privilege motion on April 13th which has not yet been disposed of. But the Hon. Speaker gave an assurance that all the information would be placed on the table of the House while the House would take up discussion of the financial statement of the Electricity Board. On that assurance I did not press my notice of privilege. I request the Hon. Chair to fulfil that assurance.

Mr. DEPUTY SPEAKER.—I do not know anything about that.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಈಗ ನಮ್ಮ ಮುಂದಿಟ್ಟಿರತಕ್ಕದ್ದು ವಿದ್ಯುಚ್ಛಕ್ತಿಯ ಸಪ್ಲಿಮೆಂಟರಿ ಎಸ್ಟಿಮೇಟ್. ಆದರೆ ಈ ಹಿಂದೆ ಮಾನ್ಯ ನಂಜೇಗೌಡರು ತಂದಿದ್ದ ಮೋಷನ್ ಇಡೀ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಹಾಗೆ ಚರ್ಚೆ ಮಾಡಬೇಕೆಂದು. ಇದಕ್ಕೆ ಈಗ ಸರ್ಕಾರದವರು 2 ದಿವಸಗಳ ಅವಕಾಶ ಕೊಡುತ್ತೇವೆಂದು ಹೇಳಿದರೆ ಸಾಲದು. ಇದಕ್ಕೆ ನಾಲ್ಕು ದಿನಗಳನ್ನಾದರೂ ಕೊಡುವುದಾದರೆ ಚರ್ಚೆಯನ್ನು ಪ್ರಾರಂಭ ಮಾಡಬಹುದು. ಆದಕ್ಕೆ ಸರ್ಕಾರದವರು ಒಪ್ಪುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ.

Sri H. N. NANJE GOWDA.—If what had been promised by the Chair, is not to be furnished, I will have to press for taking up my privilege motion.

Mr. DEPUTY SPEAKER.—Hon. Members privilege motion is not before the House.

Sri H. N. NANJE GOWDA.—It is on the record as to what assurance had been given by the Hon. Chair during the last session. If we do not have necessary information, how are we to participate in the deliberations ? Are we expected to participate without having the relevant information in the matter ? I am very sorry is the assurance of the hon. Chair is not respected and necessary information is not placed before the House.

Sri D. B. KALMANKAR.—The Budget of the State Electricity Board has increased. We wanted some information which the Government promised to furnish. According to the statement made, there are various heads which we do not understand. We want to know what is the expenditure, what are the receipts of the Board, how do they compare with the old ones and at what rate those are being imposed ? The statement that is given now does not give any idea at all. When that is the position how does the discussion, if held, would be useful ? Our discussion will be artificial and it will have no meaning. Therefore, I

request the Hon. Chair to arrange to furnish all the information about the increase of tarrif rate and how it was implemented.

Sri H. N. NANJE GOWDA.—It is given here as Rs. 18 crores. I want to know the forecast of 1969–70. Should we take that it is a correct statement ?

Mr. DEPUTY SPEAKER.—I am requesting you to speak on this point. The Minister concerned will reply.

Sri D. B. KALMANKAR.—In order to facilitate smooth discussion, we want all the relevant matters before hand. If he wants, he may give an introductory speech.

ಶ್ರೀ ಕೆ. ಎಚ್. ರಂಗನಾಥ್.—ಅದಕ್ಕೆ ಬೇಕಾದಂಥ ಅವಶ್ಯಕವಾದಂಥ ಡೇಟಾವನ್ನು ಸರ್ಕಾರದವರು ಒದಗಿಸಿಕೊಡಬೇಕು. ಕಾನೂನು ಪ್ರಕಾರ 10 ಕೋಟಿ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ. ಈ ವಾರ್ಷಿಕ ಸಭೆಯಲ್ಲಿ 30 ಕೋಟಿ ರೂಪಾಯಿಗಳವರೆಗೆ ಇರಬೇಕೆಂದು ನಿರ್ಣಯ ಮಾಡಿದೆ. ಇವತ್ತು 48 ಕೋಟಿ ರೂಪಾಯಿಗಳವರೆಗೂ ನಿಮ್ಮನ್ನು ಕೇಳದೆ ಕಾನೂನು ವಿರುದ್ಧವಾಗಿ ಉಪಯೋಗಿಸಿಕೊಂಡಿದ್ದಾರೆ. ಅಂತಹ ಅವ್ಯವಹಾರವನ್ನು ವಿದ್ಯುಚ್ಛಕ್ತಿ ಮಂಡಲಿಯವರು ಮಾಡುತ್ತಿದ್ದಾರೆ. ಅದನ್ನು ವಿಚಾರ ಮಾಡಬೇಕು. The M.S.E.B. is not authorised to draw so much of loan. According to annual statement, the receipt is not according to law. There is hundred per cent increase in loan and revenue.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಇಂತಹ ಪರಿಸ್ಥಿತಿ ಇದೆ. ನಾನು ಈ ಸಭೆಗೆ ಬಂದು 8 ವರ್ಷಗಳಾಗಿವೆ. ಒಂದು ವರ್ಷವೂ ಎಂ ಎಸ್. ಇ. ಬಿ. ಬಗ್ಗೆ ಈ ರೀತಿಯಾಗಿ ಚರ್ಚೆ ಯಾಗಲಿಲ್ಲ. ಇವತ್ತು ಎಂ. ಎಸ್. ಇ. ಬಿ. ಅಟಾನಮಸ್. ಬಾಡಿಯಾಗಿರುವುದರಿಂದ ಈ ಸಭೆಗೆ ಅಧಿಕಾರವಿಲ್ಲವೆಂದು ಹೇಳುತ್ತಾರೆ ಇದರಿಂದ ಅದು ಆಪಿದ್ದೇ ಆಟ. ನಾವು ನೋಡುತ್ತಾ ಇದ್ದೇವೆ. ಇವತ್ತು ಸರ್ಕಾರದವರು ಅಪ್ಪಣೆ ಕೊಡಿಸಿರುವ ಹಾಗೆ ಟ್ಯಾರಿಫ್ ರೇಟ್ ಮಿನಿಮಂ ಸೇಕಡ 100ರಷ್ಟು ಜಾಸ್ತಿ ಮಾಡಿದ್ದಾರೆ ಡಿಪಾಜಿಟ್‌ನಲ್ಲಿಯೂ ಸೇಕಡ 100ರಷ್ಟು ಜಾಸ್ತಿ ಯಾಗುತ್ತದೆ. ಇವತ್ತು ರೈತ ಬಾವಿ ತೆಗೆದರೆ, 3 ಎಕರೆ ವ್ಯವಸಾಯ ಮಾಡಬೇಕಾದರೆ ಆತನಿಗೆ ಪ್ರಾಣವೇ ಹೋಗುತ್ತದೆ. ಇನ್ನೊಂದು ಕಡೆ ವಿಪರೀತವಾಗಿ ಸಾಲ ಮಾಡುತ್ತಿದ್ದಾರೆ. ಅವರು ಸಾಲ ಮಾಡುವುದನ್ನು ವಿಚಾರಮಾಡಿ ಅಂದರೆ ಅದನ್ನು ಚರ್ಚೆಮಾಡುವುದಕ್ಕೆ ಅಧಿಕಾರವಿಲ್ಲ ಎಂದು ಹೇಳುತ್ತಾರೆ.

ಇನ್ನು ಇದರಲ್ಲಿ ಆದಾಯ ಎನ್ನುವುದನ್ನು ಅನ್ಯಾಯರ್ ಸ್ಟೇಟ್‌ಮೆಂಟ್ ಎಂದು ಕರೆಯುತ್ತಾರೆ. ಅನ್ಯಾಯರ್ ಸ್ಟೇಟ್‌ಮೆಂಟ್ ಎಂಬುದಕ್ಕೆ ಎಸ್ಟಿಮೇಟೆಡ್ ರೆವಿನ್ಯೂ ಎಂಬುದಾಗಿ ಹೇಳಬೇಕು. ಫೆಬ್ರುವರಿ ತಿಂಗಳೊಳಗೇ ಎಂ. ಎಸ್. ಇ. ಬಿ. ಯವರು ಸರ್ಕಾರಕ್ಕೆ ಈ ವರದಿಯನ್ನು ಕಳುಹಿಸಿದ್ದರು ಏಪ್ರಿಲ್ ಒಂದನೇ ತಾರೀಖಿನಲ್ಲಿ ಅದನ್ನು ಇಲ್ಲಿ ಇಟ್ಟರು ಇವತ್ತು ಆಗಲೇ ವಿದ್ಯುಚ್ಛಕ್ತಿದರ ಜಾಸ್ತಿಯಾಗಿದೆ. ಆದರೆ ಎಷ್ಟು ರೇಟ್ ಜಾಸ್ತಿಯಾಗಿದೆ, ಎಷ್ಟು ರೆವಿನ್ಯೂ ಬರುತ್ತದೆಂಬುದು ಅದರಲ್ಲಿಲ್ಲ ಅದರ ಬಗ್ಗೆ ಅಂಕಿ ಅಂಶಗಳನ್ನು ಮಂತ್ರಿಗಳು ಹೇಳಿದರೆ ನಾವು ಚರ್ಚೆ ಮಾಡಬಹುದು. ದೊಡ್ಡದೊಡ್ಡ ಚೀಫ್ ಇಂಜಿನಿಯರುಗಳು, ಅಧಿಕಾರಿಗಳು ಎಲ್ಲರೂ ಎಂ.ಎಸ್.ಇ.ಬಿ. ಯಲ್ಲಿದ್ದಾರೆ. ಅವರಿಂದ ಎಲ್ಲಾ ರಿಕಾರ್ಡ್‌ಗಳನ್ನು ತರಿಸಿ ಈ ಸಭೆಯ ಮುಂದೆ ಇಡಿ. ಅಲ್ಲಿನ ಪರಿಸ್ಥಿತಿ ಏನಿದೆಯೆಂಬುದನ್ನು ತಿಳಿಸಿ. ನಂತರ ವಿಚಾರಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದನ್ನು ನುಮ್ಮನೆ ಚರ್ಚೆಮಾಡುವುದರಿಂದ ಏನೂ ಪ್ರಯೋಜನವಿಲ್ಲ.

† ಶ್ರೀ ವೀರೇಂದ್ರ ಪಾಟೀಲ್.—ಪ್ರತಿವರ್ಷವೂ ರೂಲ್ಸ್ ಪ್ರಕಾರ ಎಲೆಕ್ಟ್ರಿಸಿಟಿ ಬೋರ್ಡಿನ ಫೈನಾನ್ಸಿಯಲ್ ಸ್ಟೇಟ್‌ಮೆಂಟನ್ನು ಈ ಸಭೆಯ ಮುಂದೆ ಚರ್ಚೆಗೆ ಇಡುತ್ತೇವೆ. ಆ ರೀತಿ ಇವತ್ತೂ ಅದು ಚರ್ಚೆಗೆ ಬಂದಿದೆ. ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ತಯಾರಾದಮೇಲೆ ಏನಾದರೂ ಸರ್‌ಚಾರ್ಜು ಹೆಚ್ಚುಮಾಡಿದರೆ ಅದು ಬಹುಶಃ ರಿವೈಜ್ಡ್ ಬಡ್ಜೆಟ್ ಆಗಿ ಅದು ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ ಬರುತ್ತದೆ. ಮತ್ತೆ ಅದು ಇಲ್ಲಿ ಚರ್ಚೆಗೆ ಬರುತ್ತದೆ. ಇದರಲ್ಲಿ ಯಾವ ತರಹ ಅಂಬಿಗ್ಯುಯಿಟಿ ಇಲ್ಲ. ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ರೆವಿನ್ಯೂ ರೆಸಿಪೀಟ್ ಸ್ಟೈಡಿನಲ್ಲಿ 18 ಕೋಟಿ

(ಶ್ರೀ ವೀರೇಂದ್ರ ಪಾಟೀಲ್)

50 ಲಕ್ಷ ರೂಪಾಯಿಗಳು, ಎಕ್ಸ್ ಪೆಂಡಿಚರ್ 20ಕೋಟಿ 74 ಲಕ್ಷ ರೂಪಾಯಿಗಳು—ಹೀಗೆ ಎಸ್ಟಿಮೇಟ್ ಮಾಡಿ ಡಿಫಿಸಿಟ್ ಬಡ್ಜೆಟ್ 2ಕೋಟಿ 20 ಲಕ್ಷ ರೂಪಾಯಿಗಳು ಇದೆ. ಈ ಡಿಫಿಸಿಟ್ಟನ್ನು ತುಂಬುವುದರ ನಿಮಿತ್ತವಾಗಿ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಸರ್‌ಚಾರ್ಜ್ ಹಾಕಿದ್ದಾರೆ ಮತ್ತು ಮಿನಿಮಂ ಐ.ಪಿ. ಸೆಟ್‌ಮೇಲೆ ಡಬ್ಬಲ್ ಮಾಡಿದ್ದಾರೆ. ಇವೆರಡರಿಂದ ಎಷ್ಟು ಬರುತ್ತದೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡ್ ಅಂದಾಜು ಪ್ರಕಾರ ಸರ್‌ಚಾರ್ಜು ಮತ್ತು ಐ.ಪಿ. ಸೆಟ್‌ನಿಂದ ಸುಮಾರು 2 ಕೋಟಿ ರೂಪಾಯಿಗಳು ಬರುತ್ತದೆ. ಇದರಿಂದ 24 ಲಕ್ಷ ರೂಪಾಯಿಗಳು ಡಿಫಿಸಿಟ್ ಎಲೆಕ್ಟ್ರಿಸಿಟಿ ಬೋರ್ಡಿಗೆ ಬರುತ್ತದೆ. ಈಗಿನ ಅಂದಾಜು ಪ್ರಕಾರ ಈ ವರ್ಷ 2 ಕೋಟಿ ರೂಪಾಯಿಗಳು ಹೆಚ್ಚು ಬರುತ್ತದೆ. ಈ ಎರಡು ಕೋಟಿ ರೂಪಾಯಿಗಳಲ್ಲಿ ರೈತರಿಂದ ಮತ್ತು ಐ. ಪಿ. ಸೆಟ್ ಸರ್ವಿಸ್‌ನಿಂದ 22 ಲಕ್ಷ ರೂಪಾಯಿಗಳಷ್ಟು ಬರುತ್ತದೆ. ಅದಕ್ಕಿಂತ ಹೆಚ್ಚಿಗೆ ಬರುವುದಕ್ಕೆ ಸಾಧ್ಯವಿಲ್ಲ. ಉಳಿದುದು ಡೊಮಸ್ಟಿಕ್ ಕನ್‌ಸಂಪ್ಷನ್ ಮತ್ತು ಸರ್ ಚಾರ್ಜುಗಳಿಂದ ಬರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದಮೇಲೆ ಇದರಲ್ಲಿ ಯಾವ ತರಹ ಅಂಬಿಗ್ಯುಯಿಟಿ ಇಲ್ಲವೆಂದು ನಾನು ತಿಳಿದು ಕೊಂಡಿದ್ದೇನೆ.

5-00 P. M.

†ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಯವರೇ, ಎಲೆಕ್ಟ್ರಿಸಿಟಿ ಮಂತ್ರಿಯವರಾದ ಶ್ರೀ ವೀರೇಂದ್ರ ಪಾಟೀಲರು 1969—70ನೇ ಇಸವಿಯ ಫೈನಾನ್ಷಿಯಲ್ ಸ್ಟೇಟ್‌ಮೆಂಟನ್ನು ನಮ್ಮ ಮುಂದಿಟ್ಟಿದ್ದಾರೆ. ಅವರು ಕೊಟ್ಟಿರತಕ್ಕಂತಹ ಅಂಕಿ ಅಂಶಗಳ ಬಗ್ಗೆ ಸಾಕಷ್ಟು ಅನುಮಾನವನ್ನು ಮಾನ್ಯ ಸದಸ್ಯರನೇಕರು ವ್ಯಕ್ತಪಡಿಸಿದ್ದಾರೆ. 69—70ನೇ ಇಸವಿಯಲ್ಲಿ ಬರತಕ್ಕ ಅಂದಾಜು ಆಯ ವ್ಯಯ ಎಷ್ಟು ಅಂದರೆ, ಅದು ಎಷ್ಟು ನರಿಯೆಗಿ ಬರುತ್ತದೆಂಬುವನ್ನು ನೋಡದೆ ಕೆಲವು ಅಂಕಿ ಅಂಶಗಳನ್ನು ಉಹಾಪೋಹದ ಮೇಲೆ ಇಲ್ಲಿ ಕೊಟ್ಟಿದ್ದಾರೆ. ಅವರು ಹೇಳಿದ ಪ್ರಕಾರ 19·25 ಕೋಟಿ ರೂಪಾಯಿ ಆದಾಯ, 20·75 ಕೋಟಿ ರೂಪಾಯಿ ವೆಚ್ಚವೆಂದು ತೋರಿಸಿದ್ದಾರೆ. ಇವತ್ತಿನ ದಿವಸ ವ್ಯವಸಾಯ ಪಂಪ್‌ಸೆಟ್ಟುಗಳಮೇಲೆ ಟ್ಯಾರಿಫ್ ರೇಟು ಹಾಕಿದ್ದನ್ನು ಅದರಲ್ಲಿ ನಮೂದು ಮಾಡದೆ, ಅದನ್ನು ಮರೆಮಾಚಿಸಿ, ಇಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದರೆ ನಿಜವಾಗಿಯೂ, ಇವರಿಗೆ ಕರಾರುವಾಕ್ಕಾದ ಲೆಕ್ಕಪತ್ರಗಳನ್ನು ಕೊಡತಕ್ಕ ಶಕ್ತಿಯಿಲ್ಲವೆಂದು ಹೇಳಬೇಕಾಗಿದೆ. ಎಲೆಕ್ಟ್ರಿಸಿಟಿ ಬೋರ್ಡಿನ ಫಾನಾನ್ಷಿಯಲ್ ಸ್ಟೇಟ್‌ಮೆಂಟ್ ಪ್ರತಿ ವರ್ಷ ಫೆಬ್ರುವರಿ ತಿಂಗಳಲ್ಲಿ ಕಳಿಸಿ, ಈ ಸಭೆಯಲ್ಲಿ ಚರ್ಚೆ ಮಾಡಿ, ಎಲೆಕ್ಟ್ರಿಸಿಟಿ ಬೋರ್ಡಿನ ಬಜೆಟಿನಲ್ಲಿ ಇರತಕ್ಕಂತಹ ಲೋಪದೋಷಗಳನ್ನು ಎತ್ತಿ ತೋರಿಸತಕ್ಕದ್ದು ಪದ್ಧತಿ. ಆದರೆ ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಳ್ಳದೆ, ಅದರ ಒಂದು ಅವಕಾಶ ಕೂಡ ಈ ಸಭೆಗೆ ಕೊಡದೆ, ಈ ಸಭೆಯನ್ನು ನಿರ್ಲಕ್ಷ್ಯ ಮಾಡಿದ್ದಾರೆಂದು ಹೇಳಬೇಕಾಗಿದೆ. ಇವತ್ತು ಎಲೆಕ್ಟ್ರಿಸಿಟಿ ಬೋರ್ಡಿನ ಆಸ್ತಿ ಏನಿದೆ, ಖರ್ಚು ಏನಿದೆ ಎಲ್ಲವನ್ನೂ ನಾವು ನೋಡಬೇಕಾಗಿದೆ, ಸರ್ಕಾರದವರು ಈಗ ಏನೇನು ವಿದ್ಯುಚ್ಛಕ್ತಿ ಪ್ರೊಜೆಕ್ಟುಗಳನ್ನು ಕಟ್ಟಿದರೋ, ಅವುಗಳನ್ನೆಲ್ಲಾ ಎಲೆಕ್ಟ್ರಿಸಿಟಿ ಬೋರ್ಡಿಗೆ ವಹಿಸಿ ಕೊಟ್ಟಿದ್ದಾರೆ. ಶರಾವತಿಯನ್ನು ಒಂದು ಮಾತ್ರ ಕೊಡದೆ ಬಿಟ್ಟಿದ್ದಾರೆ. ಹೀಗೆ ಕೊಟ್ಟು ಬಿಟ್ಟು ಸರ್ಕಾರದವರು ಇವತ್ತು ಒಂದು ಮಾರ್ವಾಡಿ ವ್ಯಾಪಾರವನ್ನು ಅವರಿಗೆ ಮಾಡಲು ಬಿಟ್ಟಿದ್ದಾರೆ.ಅವರು ವ್ಯಾಪಾರ ಮಾಡುವುದಕ್ಕೋಸ್ಕರ ಒಂದು ಅಂಗಡಿ ಇಟ್ಟಿದ್ದಾರೆ. ಅದು ಎಲೆಕ್ಟ್ರಿಸಿಟಿ ಬೋರ್ಡು ಎಂದು. ಅವರು ಮಾರ್ವಾಡಿಯೋಪಾದಿಯಲ್ಲಿ ಲಾಭ ನಷ್ಟ ಎಂಬುದು ನೋಡಿಕೊಂಡು ಕೆಲಸ ಮಾಡುತ್ತಿದ್ದಾರೆ. ಪಂಪ್‌ಸೆಟ್ಟು ಹಾಕಿದರೆ, ಖರ್ಚು ಎಷ್ಟಾಗುತ್ತದೆ, ಎಷ್ಟು ಲಾಭ ಬರುತ್ತದೆ ಎಂಬ ಒಂದು ದೃಷ್ಟಿಯಿಂದ ಮಾಡುತ್ತಿದ್ದಾರೆ. ಇವತ್ತು ಇವರ ಸ್ಟೋರ್ಸ್ ಲೆಕ್ಕ ನೋಡುವುದಾದರೆ, ಇವರ ಲೆಕ್ಕದ ಪ್ರಕಾರ 1969-70ನೇ ಇಸವಿಯಲ್ಲಿ ಇವರ ಸ್ಟೋರ್ಸ್ ಸುಮಾರು 950 ಲಕ್ಷ ರೂಪಾಯಿಯಷ್ಟು ಇದೆ. ಇವರು ಬಡ್ಡಿ ಎಷ್ಟು ಕೊಡುತ್ತಿದ್ದಾರೆಂದರೆ 1965—66ರಲ್ಲಿ ಎರಡುವರೆ ಕೋಟಿ ಕೊಡುತ್ತಿದ್ದಾರೆ. ಸರ್ಕಾರದ ಕಡೆಯಿಂದ ಕೊಟ್ಟಿರತಕ್ಕ ಲೋನು ಸುಮಾರು 17·25 ಕೋಟಿ. 28·75 ಕೋಟಿ ಪಬ್ಲಿಕ್ ಡಾರೋಯಿಂಗ್ಸ್. ನರಿಯಾದ ಉತ್ಪತ್ತಿ ಮಾಡದೆ ಈ ಲೋನು ದಿನೇ ದಿನೇ ಏರುತ್ತಾ ಇದೆ. ಇನ್ನು ಒಂಬತ್ತುವರೆ ಕೋಟಿ ರೂಪಾಯಿಯಷ್ಟು ಮ್ಯಾಟೀರಿಯಲ್ಸ್ ಇವರ ಸ್ಟೋರ್ಸಿನಲ್ಲಿದೆ. ಅವುಗಳಲ್ಲಿ ಎಷ್ಟು ಕೆಲಸಕ್ಕೆ ಉಪಯೋಗವಿಲ್ಲದವುಗಳಿದ್ದಾವೋ ಎಂಬ ಗೊತ್ತಿಲ್ಲ. ಇವರ ನೀತಿಯಲ್ಲಿ ಸ್ಟೋರ್ಸ್ ಇಂತಿಷ್ಟೇ ಇಡಬೇಕೆಂದೇನೂ ಇಲ್ಲ. ಇವತ್ತು ಲೈನ್ಸ್‌ಲ್ಲಿ, ಮ್ಯಾಟರೀಯಲ್ಸ್ ಎಲ್ಲಾ ಬಿದ್ದಿವೆ. ಯಾರು ತಿಂದರೂ ಗೊತ್ತಿಲ್ಲ. ಇವತ್ತು ತಾಮ್ರದ ತಂತಿಗಳನ್ನು ತೆಗೆದು ಅಲ್ಯೂಮಿನಿಯಂ ತಂತಿಗಳನ್ನು ಹಾಕಬೇಕೆಂದು ತೀರ್ಮಾನ ಮಾಡಿದ್ದಾರೆ. ಆದರೆ

ಇದ್ದಂತಹ ತಾಮ್ರದ ತಂತಿಗಳು ಎಲ್ಲಿ ಹೋಯಿತು? ನೂರಾರು ಮೈಲಿ ಉದ್ದದ ತಂತಿಗಳನ್ನು ತೆಗೆದು ಹಾಕಿದ್ದು ಅವುಗಳೆಲ್ಲಾ ಎಲ್ಲಿ ಹೋಯಿತು? ನಿಮ್ಮ, ಈ ವ್ಯವಸ್ಥೆಯಲ್ಲಿ ದುಂದು ವೆಚ್ಚದಿಂದ ಖರ್ಚು ಜಾಸ್ತಿಯಾಗಿದೆ. ಇವತ್ತು ನಿಮ್ಮ ಬಜೆಟನ್ನು ಹಿಡಿತದಲ್ಲಿ ಇಡದೆ, ಏರುಪೇರು ಆಗುತ್ತಿದೆ. ಇವತ್ತು ಮೈಸೂರುದೇಶದಲ್ಲಿನ ಒಂದೊಂದೇ ಎಲೆಕ್ಟ್ರಿಸಿಟಿ ಪ್ರೊಜೆಕ್ಟನ್ನು ಅವರಿಗೆ ಕೊಡುತ್ತಿದ್ದೀರಿ. ಭದ್ರಾ ಕೊಟ್ಟಿರಿ, ಶರಾವತಿ ಕರೆಂಟ್ ಮಾರಾಟ ಮಾಡಿದಿರಿ. ಇಷ್ಟೆಲ್ಲಾ ಮಾಡಿದರೂ ದಿನೇ ದಿನೇ ಲಾಸ್ ಆಗುತ್ತಾ ಇದೆ. ಅದಕ್ಕೆ ಇವತ್ತು ಹೇಳುತ್ತಿದ್ದಾರೇನೆಂದರೆ, ಹಳ್ಳಿಗಳಿಗೆ ಇರಿಗೇಶನ್ ಪಂಪ್‌ಸೆಟ್ಟುಗಳಿಗೆ ಕರೆಂಟ್ ಕೊಟ್ಟಿದ್ದೇವೆ, ಅದಕ್ಕೋಸ್ಕರ ಲಾಸ್ ಆಯಿತು ಎಂದು ಹೇಳುತ್ತಿದ್ದಾರೆ. ನಿಮ್ಮ ಆಯವ್ಯಯ ಪಟ್ಟಿಯನ್ನು ನೋಡಿದರೆ ನೀವು ಎಷ್ಟು ವಿದ್ಯುಚ್ಛಕ್ತಿ ಎಷ್ಟು ಕಿಲೋವಾಟ್ಸ್ ತಯಾರು ಮಾಡುತ್ತಿದ್ದೀರಿ ಮತ್ತು ಇದರಿಂದ ಇರಿಗೇಶನ್ ಪಂಪಸೆಟ್ಸ್‌ಗೋಸ್ಕರ ಎಷ್ಟು ಖರ್ಚಾಗುತ್ತದೆ ಎಂದು ಗೊತ್ತಾಗುತ್ತದೆ. ಇದರಿಂದ ಲಾಸ್ ಆಗುತ್ತದೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ನಿಮಗೆ ನಿಮ್ಮ ಖರ್ಚಿನಮೇಲೆ ಹಿಡಿತವಿಲ್ಲದಿರುವುದರಿಂದ, ಲಾಸ್ ತುಂಬುವುದಕ್ಕೋಸ್ಕರ ಇದನ್ನು ಮಾಡುತ್ತಿದ್ದೀರಿ. ನಿಜವಾಗಿಯೂ ಮಿತವ್ಯಯದ ದೃಷ್ಟಿಯಿಂದ ಎಲೆಕ್ಟ್ರಿಸಿಟಿ ಬೋರ್ಡ್ ಕೆಲಸ ಮಾಡಿದರೆ ನಮ್ಮ ಖರ್ಚಿನಿಂದ ಸುಮಾರು 10 ಕೋಟಿ ರೂಪಾಯಿ ಆದಾಯ ಕೂಡ ಬಹುದಾಗಿತ್ತು. ನೀವು ಇವತ್ತು ಲೈನ್ಸ್ ಹಾಕುವಾಗ, ಟ್ರಾನ್ಸ್‌ಮಿಶನ್ ಲೈನ್ ಹಾಕುವಾಗ ಹೇಗೆ ಕೆಲಸ ಮಾಡುತ್ತಿದ್ದೀರಿ? ಟೆಂಡರ್ ಕರೆಯುತ್ತೀರಾ, ಮತ್ತು ಕಂಟ್ರಾಕ್ಟರಿಗೆ ಏನು ಕಂಡಿಶನ್ ಹಾಕಿ ಆ ಕೆಲಸಗಳನ್ನು ಕೊಡುತ್ತಿದ್ದೀರಿ? ಇದು ಒಂದು ರೀತಿಯ ಲೂಟಿ ಮಾಡುವುದಕ್ಕೋಸ್ಕರ, ಕಂಟ್ರಾಕ್ಟರುಗಳಿಗೆ ಕೊಡುವುದಕ್ಕೋಸ್ಕರ ಇಂಥ ಪ್ರೊಜೆಕ್ಟುಗಳನ್ನು ಕಟ್ಟಿದ್ದೀರಿ. 40 - 50 ಕೋಟಿ ರೂಪಾಯಿ ಪ್ರೊಜೆಕ್ಟುಗಳು ಇವತ್ತು 150 ಕೋಟಿ ರೂಪಾಯಿಯಾಯಿತು. ಟ್ರಾನ್ಸ್‌ಮಿಶನ್ ಲೈನುಗಳಿಗೆ ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡಿದ್ದೀರಿ. ಇದರಿಂದ ಮಿತವ್ಯಯದ ದೃಷ್ಟಿಯಿಂದ ಈ ಕೆಲಸಗಳನ್ನು ಮಾಡಲು ನಿಮ್ಮಿಂದ ಸಾಧ್ಯವಾಗಲಿಲ್ಲ.

[Mr. Chairman (Sri K. H. Ranganath) in the Chair.]

10 ಕೋಟಿ ರೂಪಾಯಿಗಳಲ್ಲಿ ಆಗತಕ್ಕಂಥ ಕೆಲಸಕ್ಕೆ 20 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದೀರಿ, ಲಾಭ ಬರುವ ಉದ್ಯಮಕ್ಕೆ ನೀವು ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ. ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುವ ಸಂಬಂಧದಲ್ಲಿ ದರವನ್ನು ಜಾಸ್ತಿ ಮಾಡಿ ಈಗೊತ್ತು ನೀವು ರೈತನ ಬೆನ್ನುಮೂಳೆಯನ್ನು ಮುರಿಯುವ ಕೆಲಸವನ್ನು ಮಾಡುತ್ತಿದ್ದೀರಿ. ನಮ್ಮ ದೇಶದಲ್ಲಿ ಉತ್ಪಾದನೆಯಾದಂತಹ ವಿದ್ಯುಚ್ಛಕ್ತಿಯನ್ನು ಈ ದೇಶದಲ್ಲಿ ಅನ್ನವನ್ನು ಬೆಳೆಯುತಕ್ಕ ಅನ್ನದಾತನಿಗೆ ಸರಿಯಾಗಿ ಕೊಡುವುದಿಲ್ಲ. ಅದರ ಜೊತೆಗೆ ರೈತನಿಗೆ ಕೊಡತಕ್ಕಂಥ ವಿದ್ಯುಚ್ಛಕ್ತಿಗೆ ಹೆಚ್ಚು ದರವನ್ನು ವಿಧಿಸುತ್ತಿದ್ದೀರಿ. ನಮ್ಮ ದೇಶದಲ್ಲಿ ಉತ್ಪಾದನೆಯಾದಂತಹ ವಿದ್ಯುಚ್ಛಕ್ತಿಯನ್ನು ಕಡಿಮೆ ದರಕ್ಕೆ ಮದ್ರಾಸು ಮತ್ತು ಆಂಧ್ರ ಪ್ರದೇಶಗಳಿಗೆ ಕೊಡುತ್ತಿದ್ದೀರಿ. ನಿಮಗೆ ನಾಚಿಕೆಯಾಗುವುದಿಲ್ಲವೆ? ಇಡೀ ಭಾರತದಲ್ಲಿ ಹೈಡ್ರೋ ಎಲೆಕ್ಟ್ರಿಸಿಟಿಯನ್ನು ತಯಾರು ಮಾಡತಕ್ಕ ಪ್ರಕೃತಿದತ್ತವಾದ ಅವಕಾಶ ಮೈಸೂರು ರಾಜ್ಯದಲ್ಲಿ ಇದೆ. ಹೀಗಿರುವಾಗ ನಮ್ಮದೇಶದಲ್ಲಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ನಮ್ಮದೇಶದ ರೈತರಿಗೆ, ನುಲಭದರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟು ಅನ್ನ ಬೆಳೆಯತಕ್ಕ ಕಾರ್ಯವನ್ನು ಸರ್ಕಾರ ಮಾಡುವುದಕ್ಕೆ ಆಗಿಲ್ಲ. ಆಂಧ್ರದಲ್ಲಿ ಮದ್ರಾಸಿನಲ್ಲಿ ಪಂಪುಸೆಟ್ಟುಗಳಿಗೆ ಜಾಸ್ತಿ ದರವನ್ನು ವಿಧಿಸಿದ್ದಾರೆ ಅದಕ್ಕೋಸ್ಕರ ನಾವು ಪಂಪುಸೆಟ್ಟಿಗೆ ಮಿನಿಮಮ್ ಚಾರ್ಜ್ ಅನ್ನು 48 ರೂಪಾಯಿಗಳನ್ನು ಹಾಕಬೇಕು ಎನ್ನುವ ವಾತಾವರಣವನ್ನು ಎಲೆಕ್ಟ್ರಿಸಿಟಿ ಬೋರ್ಡಿನವರು ಹೇಳುತ್ತಿದ್ದಾರೆ. ನಿಮ್ಮ ರೈತರಿಗೆ ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನುವ ಮನೋಭಾವವೆ ನಿಮಗೆ ಇಲ್ಲ. ನೀವು ಈ ವಿಚಾರದಲ್ಲಿ ಮಾರ್ಪಾಡಿ ಬುದ್ಧಿಯನ್ನು ಉಪಯೋಗಿಸಿ ದೇಶವನ್ನು ಆಳುತ್ತಿದ್ದೀರಿ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮೈಸೂರುದೇಶದಲ್ಲಿರತಕ್ಕ ಸುಮಾರು 83 ಸಾವಿರ ಪಂಪುಸೆಟ್ಟುಗಳಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಪಂಪುಸೆಟ್ಟುಗಳು ಹಳೆಯ ಪಂಪುಸೆಟ್ಟುಗಳು ಹಿಂದೆ ಹಾಕಿದಂತಹ ಪಂಪುಸೆಟ್ಟುಗಳು. ಅವುಗಳಲ್ಲಿ ಬಹುಭಾಗ ಕೋಲಾರ, ಬೆಂಗಳೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಇವೆ. ಆ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಲೈನನ್ನು ಎಳೆದದ್ದು ಅನೇಕ ವರ್ಷಗಳ ಹಿಂದೆ. ಆಗ ಒಂದು ಪೋಲಿನ ಬೆಲೆ ಏನಿತ್ತು, ತಂತಿಯ ಬೆಲೆ ಏನಿತ್ತು, ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಲೈನನ್ನು ಹಾಕಲು ಬೆಲೆ ಏನಿತ್ತು, ಇವೊತ್ತು ಏನಿದೆ ಇದೊಂದನ್ನೂ ನೀವು ಲೆಕ್ಕ ಹಾಕದೇ ಎರಡೂ ಸೇರಿಸಿ ಪಂಪುಸೆಟ್ಟುಗಳಿಗೂ ಒಂದೇ ದರವನ್ನು ವಿಧಿಸಿದ್ದೀರಿ. ತಂತಿಯ ಬೆಲೆ ಜಾಸ್ತಿಯಾಗಿದೆ, ಕಂಬದ ಬೆಲೆ ಜಾಸ್ತಿಯಾಗಿದೆ, ಎಂದು ಹೇಳಿ ಈಗ 10–12 ವರ್ಷಗಳ ಹಿಂದೆ ಹಾಕಿದಂತಹ ಪಂಪುಸೆಟ್ಟುಗಳಿಗೂ ಈಗಿನ

(ಶ್ರೀ ಎಸ್. ಶಿವಪ್ಪ)

ದರವನ್ನೇ ವಿಧಿಸಿದ್ದೀರಿ. ಇದು ನ್ಯಾಯವೇ! ನೀವು ಮದ್ರಾಸು, ಆಂಧ್ರ, ಮಹಾರಾಷ್ಟ್ರ ಮುಂತಾದ ರಾಜ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವ ಕಾರಣ ನಮ್ಮಲ್ಲಿ ಸರ್‌ಪ್ಲಸ್ ವಿದ್ಯುಚ್ಛಕ್ತಿ ಇದೆಯೆಂದು. ತೆರೂರಾದ ಮೈಸೂರಿಗೆ, ಬಡರೈತನು ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ಹೆಚ್ಚಿನ ಬೆಲೆಯನ್ನು ವಿಧಿಸಿರತಕ್ಕದ್ದು ರಾಜಕೀಯ ಲಕ್ಷಣವೇ? ಇದನ್ನು ಸರ್ಕಾರ ಯೋಚನೆ ಮಾಡಬೇಕು. ಮೊದಲು ಇರಿಗೇಷನ್ನಿಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ಒಂದು ಅಶ್ವಶಕ್ತಿಗೆ ಒಂದು ರೂಪಾಯಿತ್ತು. ಅದನ್ನು 100 ಪರ್ಸೆಂಟ್ ಜಾಸ್ತಿ ಮಾಡಿ ಎರಡು ರೂಪಾಯಿ ಮಾಡಿದರು ಎರಡು ರೂಪಾಯಿ ಇದ್ದದ್ದನ್ನು ಈಗ 4 ರೂಪಾಯಿ ಮಾಡಿದ್ದಾರೆ. ಒಂದಕ್ಕೆ ಎರಡರಷ್ಟು ಜಾಸ್ತಿ ಮಾಡಿದ್ದಾರೆ. ಒಬ್ಬ ರೈತ ಒಂದು ಅಶ್ವಶಕ್ತಿ ಪಂಪುಸೆಟ್ಟನ್ನು ತೆಗೆದುಕೊಂಡರೂ ಕೂಡ ಅವನು 48 ರೂಪಾಯಿಗಳು ಮಿನಿಮಮ್ ಚಾರ್ಜ್ ಕಟ್ಟಬೇಕು ಇದು ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮ ಮಂತ್ರಿಗಳು ಕೆಲವರು ನಾವು ರೈತರ ಪ್ರತಿನಿಧಿಗಳು ಎಂದು ಹೇಳುತ್ತಾರೆ. ಯಾವ ರೈತನೂ ಕೂಡ 12 ತಿಂಗಳು ವಿದ್ಯುಚ್ಛಕ್ತಿಯನ್ನು ಉಪಯೋಗಿಸುವಷ್ಟು ನೀರು ಬಾವಿಯಲ್ಲಿಲ್ಲ. ಹಳ್ಳಿಗಳವರ ಕಷ್ಟ ಬಹಳವಾಗಿದೆ. ಪಾಪ ಅವರಿಗೆ ಮಳೆಗಾಲದಲ್ಲಿ ಒಂದೆರಡುಮೂರು ತಿಂಗಳು ಅವರಿಗೆ ನೀರು ಸಿಕ್ಕುತ್ತದೆ. ಅದೂ ಅವರ ಪುಣ್ಯ. ಇನ್ನು 9 ತಿಂಗಳು ಅವರು ಸುಮ್ಮನೇ ಇರಬೇಕಾಗುತ್ತದೆ. ಹೀಗಿರಬೇಕಾದರೆ ಪಂಪುಸೆಟ್ಟುಗಳಿಗೆ ಹೇಗೆ ಅವರು 3 ತಿಂಗಳಿಗೆ ಸರಾಸರಿ ಮಿನಿಮಮ್ ಚಾರ್ಜ್ ಕೊಡಬೇಕು. ಒಂದು ಅಶ್ವಶಕ್ತಿಗೆ 4 ರೂಪಾಯಿಗಳನ್ನು ಎಲ್ಲಿಂದ ತಂದು ಕೊಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಒಂದಕ್ಕೆ ನಾಲ್ಕರಷ್ಟು ದರವನ್ನು ಪಟ್ಟಿಸಿರುವುದರಿಂದ ಅನೇಕ ಜನ ರೈತರು ಪಂಪುಸೆಟ್ಟುಗಳನ್ನು ಬಿಡುವ ಕಾಲ ಬಂದಿದೆ. ಅದಕ್ಕೆ ಕೊಡತಕ್ಕಂಥ ದುಡ್ಡೂ ಕೂಡ ರೈತನಿಗೆ ಹುಟ್ಟುವುದಿಲ್ಲ. ಅಂಥಾ ಒಂದು ದೊಡ್ಡ ತೊಂದರೆಯನ್ನು ಇರಿಗೇಷನ್ ಪಂಪುಸೆಟ್ಟುಗಳನ್ನು ಉಪಯೋಗಿಸತಕ್ಕವರಮೇಲೆ ಹಾಕಿದ್ದೀರಿ. ಕೈಗಾರಿಕೆಗಳಿಗೆ ಯಾವರೀತಿಯ ದರಗಳಲ್ಲಿ ನೀವು ವಿದ್ಯುಚ್ಛಕ್ತಿಯನ್ನು ಕೊಡುತ್ತೀದ್ದೀರಿ? ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಇಡೀ ಭಾರತದೇಶದವರನ್ನೇ ಕರೆಯುತ್ತಿದ್ದೀರಿ ಬೊಂಬಾಯಿ, ಕಲ್ಕತ್ತ, ಮುಂತಾದ ನಗರಗಳಿಗೆ ಹೋಗಿ ಕೈಗಾರಿಕೋದ್ಯಮಿಗಳವರ ಬಾಗಿಲನ್ನು ತಟ್ಟಿ ತಟ್ಟಿ ಬನ್ನಿ ಬನ್ನಿ ಕೈಗಾರಿಕೆಗಳನ್ನು ಸ್ಥಾಪನೆಮಾಡಿ ಸುಲಭವರವಲ್ಲಿ ನಿಮಗೆ ಎಷ್ಟು ವಿದ್ಯುಚ್ಛಕ್ತಿಯನ್ನಾದರೂ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಅನ್ನವನ್ನು ಬೆಳೆಯತಕ್ಕ ರೈತನಿಗೆ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ನೀವು ಏತಕ್ಕೆ ಪ್ರಯತ್ನ ಮಾಡಲಿಲ್ಲ. ಬಡಬೋರೇ ಗೌಡನಿಗೆ, ಅನ್ನದಾತನಿಗೆ ಬೆನ್ನು ಮೂಳೆಯನ್ನು ಮುರಿಯುವ ಕಲಸವನ್ನು ಮಾಡುತ್ತಿದ್ದೀರಿ. ನಮಾಜವಾದವನ್ನು ಶ್ಲೇಷತಕ್ಕಂಥ ಶ್ರೀಮಾನ್ ಪರಮೇಶ್ವರಪ್ಪನವರು ಈ ಕಡೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಹೋಗಿದ್ದಾರೆ. ಅವರಿಗೆ ಇಂಥಾ ಒಂದು ಟ್ಯಾರಿಫನ್ನು ಜಾಸ್ತಿಪಾಡುವುದಕ್ಕೆ ಹೇಗೆ ಮನಸ್ಸು ಬಂತು? ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಹಿಂದೆ ಇದ್ದಂತಹ ದರಗಳಿಗೆ ಪಂಪುಸೆಟ್ಟುಗಳ ದರವನ್ನು ಕೂಡಲೇ ಇಳಿಸಬೇಕು. ಅದಕ್ಕೆ ಸಂಬಂಧಪಟ್ಟ ಆಜ್ಞೆಯನ್ನು ಮಾಡಬೇಕು. ಇದು ರೈತರಿಗೋಸ್ಕರ ಇರತಕ್ಕ ಸರ್ಕಾರ ಎನ್ನುವ ನಂಬಿಕೆ ನಿಮಗೆ ಇವ್ವ ಪಕ್ಷದಲ್ಲಿ ಈಗ ಹೊಸದಾಗಿ ದರವನ್ನು ವಿಧಿಸಿರತಕ್ಕ ಆಜ್ಞೆಯನ್ನು ನಾಳೆಯೇ ರದ್ದುಮಾಡಿ ಹಳೆಯ ದರದಲ್ಲಿಯೇ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎನ್ನುವಂಥಾ ಒಂದು ಘೋಷಣೆಯನ್ನು ಹೊರಡಿಸಬೇಕು. ಇಲ್ಲದಿದ್ದರೆ ರೈತರು ಒಂದು ದೊಡ್ಡ ಮುಷ್ಕರ ಹೂಡುತ್ತಾರೆ. ಈಗ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ದರವನ್ನು ಪರಿಸಿರುವುದರಿಂದ ಬರತಕ್ಕ ದುಡ್ಡಿನಿಂದಲೇ ಸರ್ಕಾರವನ್ನು ನಡೆಸಬೇಕಾದಂತಹ ಅವಶ್ಯಕತೆ ಇಲ್ಲ. ರೈತರು ದೊಡ್ಡ ಹೋರಾಟವನ್ನು ಮಾಡಬೇಕಾದರೆ ಅವರು ಬೆಂಗಳೂರಿಗೆ ಬರಬೇಕು. ಅವರು ಬೆಂಗಳೂರಿಗೆ ಬಂದು ವಿಧಾನಸೌಧವನ್ನು ಮುತ್ತಿಗೆ ಹಾಕಿದಾಗ ಅದರಿಂದ ಸಂತೋಷಪಡತಕ್ಕದ್ದಲ್ಲ ಎರಡು ಕೋಟಿ ಜನಗಳಿಂದ ಆರಿಸಿಬಂದ ಪ್ರತಿನಿಧಿಗಳು ಈ ಶಾಸನಸಭೆಯಲ್ಲಿ ಇದ್ದಾರೆ. ಎಲ್ಲರೂ ರೈತನ ಹಿತ ರಕ್ಷಣೆ ಮಾಡಬೇಕು. ಈಗ ಸರ್ಕಾರದವರು ಪಂಪುಸೆಟ್ಟುಗಳಿಗೆ ಹೆಚ್ಚಿನ ದರವನ್ನು ವಿಧಿಸತಕ್ಕ ಬಗ್ಗೆ ಏನೊಂದು ಕರಾಳ ಶಾಸನವನ್ನು ಸರ್ಕಾರದವರು ಮಾಡಿದ್ದಾರೆಯೋ ಅದನ್ನು ವಜಾ ಮಾಡಬೇಕೆಂದು ನಾನು ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ಹೇಳಬೇಕಾಗುತ್ತದೆ. ರೈತ ಸತ್ಯಾಗ್ರಹ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಹೇಳುತ್ತೇನೆ. ಕೋರಾರ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪಂಪುಸೆಟ್ಟುಗಳು ಇವೆ. ಇವ್ವಾಗ್ಲಾ ಎಲೆಕ್ಟ್ರಿಸಿಟಿ ಬೋರ್ಡಿನವರು ಹೇಳಿದ ಹಾಗೆ ಕೇಳುತ್ತೇವೆ ಎಂದರೆ ನಿಮಗೆ ಯೋಚನೆ ಮಾಡತಕ್ಕ ಶಕ್ತಿ ಇಲ್ಲವೇ! ಅವರು ಹೇಳಿದಹಾಗೆ ಕೇಳುವಂಥಾ ಅವಕಾಶವನ್ನು ಕೊಡಬೇಡಿ.

ರೈತನಿಗೆ ಅನುಕೂಲವಾಗುವ ಹಾಗೆ ಆಜ್ಞೆ ಮಾಡತಕ್ಕ ಶಕ್ತಿ ಸರ್ಕಾರಕ್ಕೆ ಇದೆ. ಆದ್ದರಿಂದ ಸರ್ಕಾರದವರು ವಿದ್ಯುಚ್ಛಕ್ತಿ ಪಂಪು ಸೆಟ್ಟುಗಳಿಗೆ ವಿಧಿಸಿರತಕ್ಕ ದರವನ್ನು ರದ್ದುಮಾಡಿ ಹಿಂದೆ ಇದ್ದಂತಹ ದರಕ್ಕೆ ಇಳಿಸುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕು. ಇದರಿಂದ ರೈತರಿಗೆ ಸಹಾಯ ಮಾಡಿದಂತಾಗುತ್ತದೆ ಎಂದು ನಾನು ಮತ್ತೊಮ್ಮೆ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಇವೊತ್ತು ಸಿಟಿಗಳಲ್ಲಿ ಮತ್ತು ಟೌನುಗಳಲ್ಲಿ ವಿದ್ಯುಚ್ಛಕ್ತಿ ದರವನ್ನು ಒಂದಕ್ಕೆರಡರಷ್ಟು ಜಾಸ್ತಿ ಮಾಡಿದ್ದಾರೆ. ಈಗ ಸಿಟಿ ಮತ್ತು ಟೌನುಗಳಲ್ಲರತಕ್ಕ ಜನಗಳು ಸೌದೆಯನ್ನು ಉಪಯೋಗಿಸುವುದನ್ನು ಕೈ ಬಿಟ್ಟಿದ್ದಾರೆ. ಮನೆಯಲ್ಲ ಹೆಂಗನರಿಗೆ ಕಷ್ಟವನ್ನು ತಪ್ಪಿಸಬೇಕೆಂದು ಅಡಿಗೆಗೂ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಿದ್ದಾರೆ. ಇದರ ಬಗ್ಗೆ ವಿದ್ಯುಚ್ಛಕ್ತಿ ಬೋರ್ಡಿನವರು ಮಾರ್ಕ್ಯುಡಿಗಳ ತತ್ವವನ್ನು ಅನುಸರಿಸಿ ವಿದ್ಯುಚ್ಛಕ್ತಿಯ ದರವನ್ನು ಜಾಸ್ತಿಮಾಡಿದ್ದಾರೆ. ಈಗ ಎರೆಕ್ಟ್ರಿಕ್ ಸ್ಟೌವ್‌ಗಳನ್ನು ಕಿತ್ತುಹಾಕಿ ಮತ್ತೆ ಸೌದೆಯನ್ನು ತರುವ ಹಾಗೆ ಇಲ್ಲ. ಇಂದು ಆಧುನಿಕ ಯುಗದಲ್ಲಿ ವಿದ್ಯುಚ್ಛಕ್ತಿ ಎಲ್ಲರಿಗೂ ಬೇಕಾದ ವಸ್ತು. ಅದು ಲಗ್ಜುರಿ ಆರ್ಟಿಕಲ್ ಅಲ್ಲ. ಇವೊತ್ತು ವಿದ್ಯುಚ್ಛಕ್ತಿಯನ್ನು ದೀಪಕ್ಕೆ ಉಪಯೋಗಿಸುತ್ತಿದ್ದಾರೆ. ಅಡಿಗೆಗೆ ಉಪಯೋಗಿಸುತ್ತಿದ್ದಾರೆ. ಇದರಿಂದಾಗಿ ಪ್ರತಿಯೊಂದು ಸಂಸಾರಕ್ಕೂ ಕೊಂದರೆಯಾಗಿದೆ. ಆದಕಾರಣ ಈಗ ಮನೆಬಳಕೆಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಗೆ ಏನು ದರವನ್ನು ಹೆಚ್ಚು ಮಾಡಿದ್ದಾರೆ ಅದನ್ನು ಸರ್ಕಾರದವರು ಪುನರ್‌ವಿಮರ್ಶೆ ಮಾಡಿ ಕಡಿಮೆ ಮಾಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ.

ವಿದ್ಯುಚ್ಛಕ್ತಿ ಬೋರ್ಡಿನವರಿಗೆ ದೊಡ್ಡ ದೊಡ್ಡ ಪವರ್ ಪ್ರಾಜೆಕ್ಟ್‌ಗಳನ್ನು ವಹಿಸಬಾರದೆಂದು ನಾನು ಆಗಾಗ್ಗೆ ಹೇಳುತ್ತಲೇ ಇದ್ದೇನೆ. ವಿದ್ಯುಚ್ಛಕ್ತಿ ಬೋರ್ಡ್ ಈಗ ಅಟಾನಮಸ್ ಬಾಡಿ ಆಗಿರುವುದರಿಂದ ಮತ್ತು ಎಲ್ಲವನ್ನೂ ಆ ಬೋರ್ಡಿಗೆ ವಹಿಸುತ್ತಿರುವುದರಿಂದ ಅವರೇ ಏತಕ್ಕೆ ನೇರವಾಗಿ ಸಾಲವನ್ನು ಎತ್ತಿ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗಬಾರದು ಎಂಬತಕ್ಕಂಥ ಸೂಚನೆಯನ್ನು ಸಹ ನಾನು ಕೊಟ್ಟಿದ್ದೇನೆ. ಈಗಾಗಲೇ ಶರಾವತಿ ಪ್ರಾಜೆಕ್ಟ್‌ನ್ನು ಅವರಿಗೆ ವಹಿಸಿದ್ದೀರಿ. ಅವರು ಅಲ್ಲಿ ಉತ್ಪತ್ತಿಯಾಗತಕ್ಕಂಥ ವಿದ್ಯುಚ್ಛಕ್ತಿಯನ್ನು ಬೇರೆ ರಾಜ್ಯಗಳಿಗೆ ಮಾರುತ್ತಾ ಇದ್ದಾರೆ. ಆ ರಾಜ್ಯಗಳಿಂದ ಬರತಕ್ಕಂಥ ಉತ್ಪತ್ತಿಯನ್ನು ಸರ್ಕಾರಕ್ಕೆ ವಾಪಸ್ಸುಕೊಡುವುದಕ್ಕೆ ಬೋರ್ಡಿನವರಿಗೆ ಆಗುತ್ತಿಲ್ಲ. ಈ ಕಾರಣದಿಂದ ಮೊನ್ನೆಯ ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಬೋರ್ಡಿನವರು ಸರ್ಕಾರಕ್ಕೆ ಕೊಡಬೆ ಕಾಗಿದ್ದ ಏಳೂವರೆ ಕೋಟಿ ರೂಪಾಯಿಗಳನ್ನು ಸಾಲ ಎಂದು ಪರಿಗಣಿಸಿದ್ದೀರಿ. ಈ ಹಣವನ್ನೇ ಕೊಡುವುದು ಅವರಿಗೆ ಕಷ್ಟವಾಗಿರುವುದರಿಂದ ಇನ್ನು ಬಡ್ಡಿಯನ್ನು ಯಾವ ರೀತಿ ಅವರು ಕೊಡುತ್ತಾರೆ ಎಂಬುದು ಅರ್ಥವಾಗುತ್ತಿಲ್ಲ. ಬೋರ್ಡಿನವರಿಗೂ ಮತ್ತು ಸರ್ಕಾರಕ್ಕೂ ಕರಾರುವಾಕ್ಕಾದ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎಂಬುದರ ಬಗ್ಗೆ ಆಖೈರಾದ ಲೆಕ್ಕ ನಮಗೆ ಸಿಗುತ್ತಿಲ್ಲ. ಬೋರ್ಡಿನವರಿಗೂ ಸರ್ಕಾರಕ್ಕೂ ಇಂಟರ್‌ಲಾಕ್ ಇರುವುದರಿಂದ ಸರಿಯಾದ ಲೆಕ್ಕ ಸಿಗುತ್ತಿಲ್ಲ. ಇನ್ನು ಮುಂದೆಯಾದರೂ ಕೂಡ ಸರ್ಕಾರದವರೇ ಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡರೆ ಸರಿಯಾದ ಲೆಕ್ಕ ಸಿಗುತ್ತದೆ ಮತ್ತು ಆ ರೀತಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ನಾನು ಸರ್ಕಾರಕ್ಕೆ ಹೇಳುವುದೇನೆಂದರೆ, ಪಂಪ್‌ಸೆಟ್ಟುಗಳಮೇರೆ ಹಾಕಿರುವ ವಿದ್ಯುಚ್ಛಕ್ತಿ ದರವನ್ನು ಕಡಿಮೆಮಾಡಬೇಕು ಮತ್ತು ಟ್ಯಾರಿಫ್ ರೇಟನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಒಂದು ಆರ್ಡರನ್ನು ನಾಳೆಯೇ ಹೊರಡಿಸುವ ಒಂದು ಒಳ್ಳೆಯ ಬಿ.ದ್ದಿ ಸರ್ಕಾರಕ್ಕೆ ಬರಲಿ ಎಂದು ಹೇಳುತ್ತೇನೆ. ಇಲ್ಲದಿದ್ದರೆ ರೈತರ ಹೋರಾಟವನ್ನು ಎದುರಿಸುವುದಕ್ಕೆ ಸರ್ಕಾರದವರು ಸಿದ್ಧರಾಗಬೇಕಾಗುತ್ತದೆ ಎಂಬ ಸೂಚನೆಯನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಗೆ ಸಂಬಂಧಿಸಿದ 1969—70ನೇ ಸಾಲಿನ ವಾರ್ಷಿಕ ವಿತ್ತೀಯ ವರದಿಯ ಪುಟ್ಟ ಚರ್ಚೆಗಾಗಿ ನಮ್ಮ ಮುಂದೆ ಬಂದಿದೆ. ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್ ಅಟಾನಮಸ್ ಬಾಡಿ ಆಗಿರುವುದರಿಂದ ಅದರ ವ್ಯವಹಾರದಲ್ಲಿ ಕೈಹಾಕುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ ಎಂಬುದು ನಿರ್ದಿಷ್ಟವಾಗಿ ಗೊತ್ತಿದೆ. ಆದರೂ ಕೂಡ ಬೋರ್ಡಿನಲ್ಲಿ ಏನಾದರು ಅಕ್ರಮಗಳು ಅನ್ಯಾಯಗಳು ಆದಾಗ ಆ ಬಗ್ಗೆ ಸರ್ಕಾರದವರು ಸೂಕ್ತವಾದ ಡೈರಕ್ಷನ್ ಕೊಡುವುದರ ಮೂಲಕ ಅಲ್ಲಿಯ ಆಡಳಿತವನ್ನು ನಿರೂಪಿಸುವಂತಹ ಒಂದು ಅಧಿಕಾರ ಸರ್ಕಾರಕ್ಕೆ ಇದೆ ಎಂಬುದನ್ನು ಸರ್ಕಾರ ಮರೆಯಬಾರದು. ಈ ಬೋರ್ಡಿನ ಆಡಳಿತವನ್ನು ಅವರು ಅನುಸರಿಸುವ ಕಾರ್ಯನೀತಿ

(ಶ್ರೀ ಕೆ. ಪಿ. ನಾಡಗೌಡ)

ಯನ್ನು ನೋಡಿದಾಗ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ಏನೆಂದರೆ ಹಳ್ಳಿಯ ಜನರು ಕೈಕೊಳ್ಳುವಂತಹ ಸಣ್ಣ ಉದ್ಯೋಗಗಳು ಮುಂದೆ ಬರುವುದಿಲ್ಲ ಎಂಬ ಬಗ್ಗೆ ಶ್ರೀ ಜಿ. ಸಿ. ಕುಮಾರಪ್ಪ ನವರು ಒಂದು ಕಡೆ ಹೇಳಿದ್ದಾರೆ. ಅವರು ಒಂದು ಸಾರಿ ಜೇನುತುಪ್ಪ ಮಾರಾಟದ ಸೊಸೈಟಿಗೆ ಭೇಟಿ ಕೊಟ್ಟು ಅಲ್ಲಿಯ ಆಯವ್ಯಯ ಪಟ್ಟಿಯನ್ನು ನೋಡಿ ಅವರ ಬಗ್ಗೆ ಅಲ್ಲಿಯ ಮೇನೇಜರ್ ಅವರ ಅಭಿಪ್ರಾಯವನ್ನು ಕೇಳಿದಾಗ ಅವರು ಸಾಕಷ್ಟು ಲಾಭ ಈ ಉದ್ಯಮದಿಂದ ಬರುತ್ತಿದೆ ಎಂದು ಹೇಳಿದರಂತೆ. ಇದಕ್ಕೆ ಕಾರಣ ಜೇನುತುಪ್ಪವನ್ನು ಉತ್ಪಾದನೆ ಮಾಡುವವರು ಮತ್ತು ಅವರ ಮಕ್ಕಳು ಯಾವ ರೀತಿಯಿಂದಲೂ ಅದನ್ನು ಬಳಕೆ ಮಾಡುವುದಿಲ್ಲ ಎಂಬುದು ತಿಳಿದುಬಂದಿದೆ. ಮತ್ತೊಂದು ಉದಾಹರಣೆ ಕೊಡೇಕೆಂದರೆ ಒಬ್ಬ ಗೌಳಿಗ ಕೆಲವು ಹಸುಗಳನ್ನು ಕಟ್ಟಿದ್ದರೆ ಅತನು ಹಾಲನ್ನೆಲ್ಲಾ ಪೇಟೆಗೆ ತೆಗೆದುಕೊಂಡು ಹೋಗಿ ಮಾರಿಬಿಡುತ್ತಾನೆ ಮತ್ತು ಅತನ ಮಕ್ಕಳು ಆ ಹಾಲನ್ನು ಕುಡಿಯುವಂತಹ ಸಂದರ್ಭ ಬರದಂತೆ ನೋಡಿಕೊಳ್ಳುತ್ತಾನೆ. ಈ ಉದಾಹರಣೆಗಳ ಪ್ರಕಾರವೇ ನಮ್ಮ ವಿದ್ಯುಚ್ಛಕ್ತಿ ಬೋರ್ಡಿನ ಕಾರ್ಯನೀತಿಯೂ ಸಹ ಆಗಿದೆ. ವಿದ್ಯುಚ್ಛಕ್ತಿ ಮಾರಾಟದಿಂದ ಬೋರ್ಡಿಗೆ ಬಜಾಪುರ ಜಿಲ್ಲೆಯಿಂದ 8 ಲಕ್ಷ ರೂಪಾಯಿಗಳ ವರಮಾನ ಇದ್ದರೆ ಗೋವಾದಿಂದ 155 ಲಕ್ಷ ರೂಪಾಯಿಗಳ ವರಮಾನ ಇದೆ. ಅಂದರೆ ನಮ್ಮ ಬೋರ್ಡಿನವರು ಹೊರ ರಾಜ್ಯಗಳಿಗೇ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತಿದ್ದಾರೆ. ಮತ್ತು ಆ ಮೂಲಕ ಹೆಚ್ಚಿನ ಲಾಭ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ. ಶರಾವತಿ ಯೋಜನೆಯ ಕೃಷ್ಣಾಕಟಾಕ್ಷ ಮೈಸೂರು ರಾಜ್ಯದ ಕೆಲವೇ ಹಳ್ಳಿಗಳ, ಕೆಲವೇ ಬಾವಿಗಳವೆರೆಗೆ ಬಿದ್ದಿದೆ. ಈ ಯೋಜನೆ ಮುಗಿದನಂತರ ಎಲ್ಲಾ ಹಳ್ಳಿಗಳಿಗೂ ಮತ್ತು ಎಲ್ಲಾ ಪಂಪ್‌ಸೆಟ್ಟುಗಳಿಗೂ ಕೂಡ ವಿದ್ಯುಚ್ಛಕ್ತಿ ಸಿಗುತ್ತದೆಂದು ನಾವು ಭಾವಿಸಿದ್ದೆವು. ಮತ್ತು ಇದೀ ರಾಜ್ಯವೇ ಬೆಳಕಿನಿಂದ ಕೂಡಿರುತ್ತದೆ ಎಂದು ಭಾವಿಸಿದ್ದೆವು. ಆದರೆ ಇವತ್ತಿನವರೆಗಿನ ಈ ಯೋಜನೆಯು ಲಾಭವನ್ನು ಕೇರಳ, ಮದ್ರಾಸ್, ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳು ಪಡೆದುಕೊಳ್ಳುತ್ತವೆ. ಈ ರೀತಿ ಬೋರ್ಡಿನವರು ಬೇರೆ ರಾಜ್ಯಗಳಿಗೆ ವಿದ್ಯುಚ್ಛಕ್ತಿ ಒದಗಿಸುತ್ತಿರುವುದರಿಂದ ನಮ್ಮ ರಾಜ್ಯದ ರೈತರಿಗೆ ಯಾವ ಅನುಕೂಲವೂ ಆಗುತ್ತಿಲ್ಲ. ಮತ್ತು ಅವರ ಜೀವನಮಟ್ಟವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಶರಾವತಿ ಯೋಜನೆಯ ಪವರ್‌ನ್ನು ದೊಡ್ಡ ದೊಡ್ಡ ಇಂಡಸ್ಟ್ರಿಗಳಿಗೆ ಒದಗಿಸುತ್ತಿರುವುದರಿಂದ ಕೆಲವೇ ಜನರು ಶ್ರೀಮಂತರಾಗುವುದಕ್ಕೆ ಅವಕಾಶವಾಗಿದೆ. ಇವತ್ತಿನವರೆಗಿನ ಈ ಬೋರ್ಡಿನವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿಲ್ಲ. ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಒಂದು ಪ್ರಯಾರಿಟಿ ಲಿಸ್ಟ್ ಮಾಡಿಕೊಂಡಿದ್ದಾರೆ. ಮತ್ತು ಅದರ ಪ್ರಕಾರ ಕೊಡುತ್ತಿದ್ದಾರೆ. ನಮ್ಮ ಭಾಗದಲ್ಲಿ ಒಂದು ಪಂಪ್‌ಸೆಟ್ಟಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಆ ಪಂಪ್‌ಸೆಟ್ಟು ಇರುವ ಹತ್ತಿರದಲ್ಲಿಯೇ ಮತ್ತೊಂದು ಬಾವಿ ಇದೆ. ಅಲ್ಲಿಗೆ ಬಹಳ ಕಡಿಮೆ ಖರ್ಚಿನಲ್ಲಿ ಲೈನ್ ಎಳೆಯಬಹುದು. ಏಕಕ್ಕೆ ಲೈನ್ ಹಾಕಿ ವಿದ್ಯುಚ್ಛಕ್ತಿ ಕೊಡಬಾರದು ಎಂದು ಎಕ್ಸಿಕ್ಯುಟಿವ್ ಇಂಜನಿಯರ್ ಅವರನ್ನು ಕೇಳಿದರೆ ಪ್ರಯಾರಿಟಿ ಲಿಸ್ಟ್ ಪ್ರಕಾರ ಕೊಡುತ್ತೇವೆಂದು ಹೇಳುತ್ತಾರೆ. ಈ ಒಂದು ಕಾರಣದಿಂದಲೇ ಬೋರ್ಡಿಗೆ ನಷ್ಟವಾಗುತ್ತಿರುವುದು. ಏಕಕಾಲಕ್ಕೆ ನೂರಾರು ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಿದರೆ ಖರ್ಚು ಸಹ ಕಡಿಮೆಯಾಗುತ್ತದೆ ಮತ್ತು ರೈತರಿಗೂ ಕೂಡ ಅನುಕೂಲವಾಗುತ್ತದೆ. ಈ ಕಾರಣದಿಂದ ಪ್ರಯಾರಿಟಿ ಲಿಸ್ಟನ್ನು ಅನುಸರಿಸುವುದನ್ನು ಕೈಬಿಡಬೇಕು, ಮತ್ತು ವ್ಯವಹಾರ ಜ್ಞಾನವನ್ನು ಬೋರ್ಡಿನವರು ಕಂಡುಕೊಳ್ಳಬೇಕು. ಫೀಲ್ಡ್ ವರ್ಕರ್‌ಗೆ 200 ರೂಪಾಯಿಗಳನ್ನು ಕೊಡದಿದ್ದರೆ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಿಗುವುದಿಲ್ಲ ಎಂಬುದು ಸೂರ್ಯಪ್ರಕಾಶವಷ್ಟು ಸತ್ಯವಾಗಿದೆ. ಆದರೂ ಕೂಡ ಸರ್ಕಾರದವರು ಈ ವಿಷಯದಲ್ಲಿ ಕೈಹಾಕಿ ತಿದ್ದುವುದಕ್ಕೆ ಇಷ್ಟ ಪಡುತ್ತಿಲ್ಲ. ಇದನ್ನೆಲ್ಲಾ ನೋಡಿದರೆ ಬೋರ್ಡಿನವರಿಂದ ಜನಸಾಮಾನ್ಯರಿಗೆ ಮತ್ತು ರೈತರಿಗೆ ಲಾಭವಾಗುತ್ತಿಲ್ಲ ಎಂಬ ಮಾತನ್ನು ಎಲ್ಲರೂ ತಿಳಿದುಕೊಂಡಿದ್ದಾರೆ. ಇದಕ್ಕೆ ಉಪಾಯ ತೋರದಂತಾಗಿದೆ.

5-30 P.M.

ಎರಡನೆಯದಾಗಿ ಪಂಪುಸೆಟ್ಟುಗಳನ್ನು ಒದಗಿಸಿ ಅದಕ್ಕೆ ಕರೆಂಟು ಕೊಡುವಾಗ ನಮ್ಮ ಬಜಾಪುರ ಬರಗಾಲ ಪೀಡಿತ ಪ್ರದೇಶ ಎಂದು ಗುರುತ್ತಿದ್ದರೂ ಇಲ್ಲಿ ಪಂಪುಸೆಟ್ಟುಗಳ ಸಂಖ್ಯೆ ಕೊಟ್ಟಿರುವುದು ಕೇವಲ 1428 ಎಂದು 1968 ರಲ್ಲಿ ಮಾಡಿದ ಅಂದಾಜು. ಇಲ್ಲಿ ಮಳೆ ಕಡಿಮೆ. ಆಧಾವ ಪೀಡಿತ ಹಳ್ಳಿಗಳಿಗೆ ಯಾವ ನೀರೂ ಹರಿಯುತ್ತಿಲ್ಲ. ಆದರೆ ಎಲ್ಲೋ ಕೆಲವು ಕಡೆ ನೀರು ನಿಂತಿದ್ದರೆ ಅಲ್ಲಿಗೆ ಪಂಪು ಸೆಟ್ಟನ್ನು ರೈತರು ಹಾಕಿಕೊಂಡು ನೀರು ಪಡೆಯಬೇಕಾಗುತ್ತದೆ. ಇದರ ಬಗ್ಗೆ

ನಾಕಷ್ಟು ಮುಂಚಿತವಾಗಿ ಒಂದು ಕಾರ್ಯಕ್ರಮ ಇಟ್ಟುಕೊಂಡು ಎಲ್ಲಿ ವಿಪರೀತವಾಗಿ ಮಳೆಯಿಂದ ಹೆಚ್ಚು ನೀರು ಬರುತ್ತದೋ ಮತ್ತು ಅದು ಉಪಯೋಗವಿಲ್ಲದೆ ಸಮುದ್ರಕ್ಕೆ ಹೋಗಿ ಸೇರುತ್ತದೋ ಅಂತಹ ನೀರನ್ನು ತಡೆದು ಅದಕ್ಕೆ ಸರಿಯಾದ ಒಂದು ಒಡ್ಡು ಮಾಡಿಕೊಂಡು ಅಲ್ಲಿ ಪಂಪು ಸೆಟ್ಟುಗಳನ್ನು ಹಾಕಿಕೊಂಡು ಇರುವ ನೀರನ್ನು ಪಯೋಗಿಸಿಕೊಳ್ಳಬೇಕು. ಇಲ್ಲಿ ಕೇವಲ ನಾಲ್ಕು ತಿಂಗಳು ಕಾಲ ಮಾತ್ರ ಹರಿಯುವ ನೀರು ಸಿಗುತ್ತದೆ. ಉಳಿದ ಕಾಲದಲ್ಲಿ ನೀರು ಇರುವುದಿಲ್ಲ. ಇಲ್ಲಿ ಪಂಪು ಸೆಟ್ಟುಗಳನ್ನು ಕೊಡುವಾಗ ಮಿನಿಮಂ ದರದಲ್ಲಿ ಬೋರ್ಡಿನವರು ಪವರ್ ಕೊಡುವುದು ಅಗತ್ಯ ಎಂದು ಹೇಳುತ್ತೇನೆ. ನಮ್ಮ ಕಡೆ ಇರುವ ನದಿಗಳು ಎಂದರೆ, ಮಲಪ್ರಭಾ ಹಾಗೂ ಘಟಪ್ರಭಾ ಮತ್ತು ಕೃಷ್ಣಾ ನದಿಯಿಂದ ಬರುವ ನೀರು ಸ್ವಲ್ಪ. ಇವು ಎಲ್ಲಿ ಬರುತ್ತಿವೆಯೋ ಅಂತಹ ಜಾಗದಲ್ಲಿ ಪಂಪು ಸೆಟ್ಟುಗಳನ್ನು ಹಾಕಿಕೊಂಡು ಪೂರ್ಣವಾಗಿ ಉಪಯೋಗಮಾಡಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಘಟಪ್ರಭಾ ಎಡದಂಡೆ ನಾರಾದಲ್ಲಿ ಇರಿಗೇಷನ್‌ಗೆ ಕೇವಲ ನಾಲ್ಕು ತಿಂಗಳು ಕಾಲ ಮಾತ್ರ ನೀರು ಸಿಗುತ್ತದೆ. ಉಳಿದ ವೇಳೆಯಲ್ಲಿ ನೀರು ಇಲ್ಲಿ ಸಿಗುವುದಿಲ್ಲ, ಘಟಪ್ರಭಾ, ಮಲಪ್ರಭಾ ಇತ್ಯಾದಿ ನದಿಗಳಿಂದ ನೀರು ಉಪಯೋಗಿಸಿಕೊಳ್ಳಬೇಕಾದರೆ ಪಂಪು ಸೆಟ್ಟುಗಳು ಇಲ್ಲಿನ ಜನರಿಗೆ ಅವಶ್ಯವಾಗಿ ಬೇಕು ಮತ್ತು ಇರಿಗೇಷನ್ ಬ್ರಾಂಚಿನವರು ಇಲ್ಲಿ ಒಂದು ಕೆನಾಲ್ ಮಾಡಿಸಿಕೊಟ್ಟು ನೀರನ್ನು ಎತ್ತಲು ಸೌಕರ್ಯ ಮಾಡಿಕೊಡಬೇಕು ಮತ್ತು ಇದಕ್ಕೆ ಇರಿಗೇಷನ್ ಬ್ರಾಂಚಿನವರು ಪರ್ಮಿಷನ್ ಕೊಡುತ್ತಿಲ್ಲ ಎಂದು ಕೇಳುತ್ತೇನೆ. ನೀರಾವರಿ ಮಾಡುವವರಿಗೆ ಹೆಚ್ಚು ಸೌಕರ್ಯ ಮಾಡಬೇಕಾದರೆ ಸಾಧ್ಯವಾದಷ್ಟು ಬೇಗ ಸರಕಾರ ಪರ್ಮಿಷನ್ನು ಕೊಟ್ಟು ಬೇಸಾಯ ಮಾಡುವವರಿಗೆ ಅನುಕೂಲ ಮಾಡಿಕೊಡಬೇಕು. ದೇಶದಲ್ಲಿ ಹೆಚ್ಚು ಆಹಾರ ಬೆಳೆಯಬೇಕು ಎಂದು ಹೇಳುತ್ತಿರುವಾಗ ಹರಿಯುವ ನೀರನ್ನು ಸದುಪಯೋಗ ಮಾಡಿಕೊಳ್ಳಬೇಕಾದರೆ ಅಲ್ಲಲ್ಲಿ ಲಿಫ್ಟ್ ಇರಿಗೇಷನ್ ಸೌಕರ್ಯವನ್ನು ಮಾಡುವ ರೈತನನ್ನು ಮೂಲಕವೋ ಇಲ್ಲವೇ ಪರ್ಮಿಟ್‌ಗಳ ಮೂಲಕವೋ ಸಹಾಯ ಮಾಡಿಕೊಡಬೇಕು ಎಂದು ಸರಕಾರದ ಗಮನಕ್ಕೆ ತರುತ್ತೇನೆ. ಇನ್ನು ರೈತರಿಗಾಗಿ ಪಂಪುಸೆಟ್ಟುಗಳನ್ನು ಕೊಡುವಾಗ ಅವಶ್ಯವಿರುವ ಮಿನಿಮಂ ದರದಲ್ಲಿ ಕೊಡಬೇಕು ಮತ್ತು ಸುಲಭ ಕಂತುಗಳಲ್ಲಿ ಅವನ್ನು ವಾಪಸು ಪಡೆಯುವಂತೆ ಪ್ರಯತ್ನ ಮಾಡಬೇಕು ಮತ್ತು ಎಲ್ಲ ರೈತರಿಗೂ ಬೇಗನೆ ಪಂಪುಸೆಟ್ಟುಗಳು ಸಿಗುವಂತೆ ಮಾಡಲು ಈಗ ಇರುವ ಪ್ರಯಾರಿಟಿಲಿಸ್ಟನ್ನು ತೆಗೆದುಹಾಕಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬೋಳಿಯಾ ರಘುರಾಮಶೆಟ್ಟಿ (ಕಾರ್ಕಳ).—ವಾನ್ಯ ಅಧ್ಯಕ್ಷರೇ, ಸಭೆಯುಮುಂದೆ ಇಟ್ಟಿರುವ ತಕ್ಕ ಎರೆಕ್ಟ್ರಿಸಿಟಿ ಬೋರ್ಡಿನ 1969—70 ರ ಸ್ಟೇಟುಮೆಂಟನ್ನು ಕೃಷಿಕರ ದೃಷ್ಟಿಯಿಂದ ನಾನು ವಿರೋಧಿಸುತ್ತೇನೆ.

ಈ ಸ್ಟೇಟುಮೆಂಟು ಬಂದ ನಂತರ ಎರೆಕ್ಟ್ರಿಸಿಟಿ ಬೋರ್ಡಿನವರು ಕೃಷಿ ಮಾಡುವ ಜನರಮೇಲೆ ಪ್ರತಿಯೊಂದು ಹಾರ್ಸ್ ಪವರು ಮೇಲೂ ಹೆಚ್ಚು ದರದ ಟ್ಯಾಕ್ಸ್ ಹಾಕುತ್ತಿದ್ದಾರೆ ಇದರಿಂದ ಹೆಚ್ಚು ರಿಟರ್ನ್ ಬರಲು ಸಹಾಯವಾಗುತ್ತದೆ ಎಂದು ಸರಕಾರ ಈಗ ರೇಟು ಹೆಚ್ಚು ಮಾಡುವುದು ಸರಿಯಲ್ಲ. ಇದು ರಾಜ್ಯದ ಎರಡು ಕೋಟಿ ಜನರ ಹಿತಕ್ಕೂ ಧಕ್ಕೆ ಉಂಟುಮಾಡುತ್ತದೆ. ಇವೊತ್ತು ನಮ್ಮ ರಾಜ್ಯದಲ್ಲಿರುವ ಆಹಾರ ಸಮಸ್ಯೆ ಪರಿಹಾರವಾಗಬೇಕಾದರೆ ಮತ್ತು ಪ್ರತಿಯೊಂದು ರಾಜ್ಯದಲ್ಲೂ ಹೆಚ್ಚು ಉತ್ಪನ್ನ ಮಾಡಬೇಕಾದರೆ ಸರಕಾರ ಹಾಗೂ ಎರೆಕ್ಟ್ರಿಸಿಟಿ ಬೋರ್ಡಿನವರು ಇಬ್ಬರೂ ಕರೆತು ಸೂಕ್ತವಾದ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಇವೊತ್ತು ರೈತ ಹೆಚ್ಚು ಆಹಾರ ಧಾನ್ಯವನ್ನು ಬೆಳೆಸಬೇಕಾಗಿದೆ. ಮತ್ತು ರೈತರಿಂದ ನಾವು ಅವಿ ಬೇರೆ ವಸೂಲು ಮಾಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಕ್ಷಾಮ ಬರುತ್ತಲೇ ಇದೆ, ಈ ದೇಶದಲ್ಲಿ ಕೆಲವು ಕಡೆ ಸರಿಯಾಗಿ ಮಳೆ ಬರಲಿಲ್ಲ. ಕೆಲವು ಕಡೆ ವಿಪರೀತವಾಗಿ ಮಳೆ ಬಂದು ರೈತರು ಬೆಳೆದ ಫಸಲೂ ನಷ್ಟವಾಗಿದೆ. ಈಚೆಗೆ ಸೆಂಟ್ರಲ್ ಗವರ್ನಮೆಂಟಿನವರು ಗೊಬ್ಬರದಮೇಲೆ ಶೇಕಡಾ ಹತ್ತರಷ್ಟು ತೆರಿಗೆ ಜಾಸ್ತಿ ಮಾಡಿದ್ದಾರೆ. ಇದರಿಂದ ಆಹಾರಧಾನ್ಯದ ಬೆಳೆಯೂ ಕೂಡ ಒಂದಕ್ಕೆರಡರಷ್ಟು ಏರಿದೆ. ಕೆಲವು ಕಡೆ ಕ್ವಿಂಟಾಲ್‌ಗೆ ಹತ್ತು ಇಪ್ಪತ್ತು ರೂಪಾಯಿಗಳಷ್ಟು ಕಡಿಮೆಯೂ ಆಗಿದೆ. ನಮ್ಮ ದೇಶದಲ್ಲಿ ಇರುವ ನದಿಗಳಿಗೆ ಎಲ್ಲ ಕಡೆಗಳಲ್ಲೂ ಕಟ್ಟೆ ಕೆಲಸ ಸಂಪೂರ್ಣವಾಗಿ ಆಗಿಲ್ಲ. ಕೆಲವು ಕಡೆ ಹೆಚ್ಚಾಗಿ ಹರಿದು ಹೋಗುವ ನೀರನ್ನು ಳಿಸಿಕೊಂಡು ಅವನ್ನು ಪಯೋಗಿಸಬೇಕಾಗಿದೆ. ಇಂತಹ ಕಡೆಗಳಲ್ಲಿ ಪಂಪುಗಳನ್ನು ರೈತರು ಉಪಯೋಗಿಸಿಕೊಂಡು ಬೇಸಾಯ ಮಾಡಬೇಕಾಗುತ್ತದೆ. ಹೆಚ್ಚು ಜನಸಾಮಾನ್ಯರು ಪಂಪುಗಳನ್ನು ಪಯೋಗಿಸಬೇಕಾದರೆ ಸರಕಾರ ಹೆಚ್ಚು ಪ್ರೋತ್ಸಾಹ ಕೊಡಬೇಕು. 1960 ರಿಂದ 1965ನೇ ಸಾಲಿನವರೆಗೆ ಒಂದು ಹೆಚ್.ಪಿ. ಎಂಜಿನ್ನಿಗಾಗಿ 18 ರೂಪಾಯಿಗಳಷ್ಟು ಟ್ಯಾಕ್ಸ್‌ನ್ನು ಹಾಕಿದ್ದರು. ಇದನ್ನು 1965ರಿಂದ 68ನೇ ಸಾಲಿನ

(ಶ್ರೀ ಬೋಳಾ ರಘುರಾಮ ಶೆಟ್ಟಿ)

ವರೆಗೆ 24 ರೂಪಾಯಿಗಳಷ್ಟು ಏರಿಸಿದ್ದಾರೆ. ಬೋರ್ಡಿನ ಬಜೆಟನ್ನು ಸಭೆಯ ಮುಂದೆ ಇಟ್ಟಮೇರೆ ಪುನಃ 48 ರೂಪಾಯಿಗೆ ಹೆಚ್ಚು ಮಾಡಿದ್ದಾರೆ. ಇದನ್ನು ರೈತರಮೇರೆ ಹಾಕುವುದಕ್ಕೆ ಮೊದಲು ಈ ಸಭೆಯ ಒಪ್ಪಿಗೆ ಪಡೆಯಬೇಕಾಗಿತ್ತು. ಇದರಮೇರೆ ಪಂಪುಸೆಟ್ ಇಟ್ಟುಕೊಂಡಿರುವವರು ಮಿನಿಮಂ ರೇಟು ಎಂದು ನಾಲ್ಕು ರೂಪಾಯಿಗಳಷ್ಟು ಬೇರೆ ಕೊಡಬೇಕಾಗಿದೆ. ಇದರಿಂದ ಎಲ್ಲರಿಗೂ ಪಂಪುಸೆಟ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಹೇಳಬೇಕಾದರೆ ಜೂನ್ ತಿಂಗಳಿಂದ ಅಕ್ಟೋಬರು ಮತ್ತು ನವಂಬರು ತಿಂಗಳವರಿಗೆ ಪಂಪುಸೆಟ್ಟು ಉಪಯೋಗ ಮಾಡುವ ಅಗತ್ಯವೇ ಇಲ್ಲ. ಅನಂತರ ಇಲ್ಲಿ ಹೆಚ್ಚು ಹರಿಯುವ ನೀರು ಸಮುದ್ರಕ್ಕೆ ಹೋಗುತ್ತದೆ. ಈಗ ಹರಿಯುವ ನೀರು ಸಿಗುವ ಕಡೆಗಳಲ್ಲಿ ಪಂಪುಸೆಟ್ಟುಗಳನ್ನು ಉಪಯೋಗಿಸಬೇಕು.

ಈಗ ಈ ಹೊಸ ಟ್ಯಾರಿಫ್ ಮತ್ತು ಹೊಸ ಟ್ಯಾಕ್ಸ್‌ನ್ನು ಏರಿಸಿದ್ದುದರಿಂದ ಇದರ ಪರಿಣಾಮ ಅಳವಾದ ಬಾವಿಯಿಂದ ನೀರು ತೆಗೆಯುವುದಕ್ಕೆ ಹೋದರೆ 3-4 ಹಾರ್ಸ್ ಪವರ್ ಪಂಪ್‌ಸೆಟ್ಟನ್ನು ಇಟ್ಟುಕೊಂಡಿದ್ದವರಿಗೆ 7-8 ಪಟ್ಟು ಹೆಚ್ಚು ಟ್ಯಾಕ್ಸ್ ಕೊಡಬೇಕಾಗುತ್ತದೆ. ಈವೊತ್ತಿನ ದಿವಸ ರೈತರು ಎಲ್ಲೋ ಸಾಲ ಮಾಡಿ ಗೊಬ್ಬರ ತಂದು, ಪಂಪುಸೆಟ್ಟನ್ನು ಇಟ್ಟು ಕೊಂಡರೆ ಆ ಬಡರೈತನಿಗೆ ಟ್ಯಾಕ್ಸ್ ಕೊಡಲಿಕ್ಕೆ ಸಾಮರ್ಥ್ಯ ಇದೆಯೇ ಎನ್ನುವುದನ್ನು ವಿಚಾರ ಮಾಡಬೇಕು. ರೈತ ಟ್ಯಾಕ್ಸ್ ಕೊಡಲು ಅಸಮರ್ಥನಾದರೆ ಡಿಸ್‌ಕನೆಕ್ಷನ್ ಮಾಡುತ್ತಾರೆ. ಈರೀತಿ ಪರಿಸ್ಥಿತಿ ರೈತನಿಗೆ ಇರುವುದರಿಂದ ತೊಂದರೆಯಾಗಿದೆಯೆಂದೂ ಎಲ್ಲಾ ಪಕ್ಷಗಳೂ, ಸಂಘ ಸಂಸ್ಥೆಗಳೂ ರೈತರೂ ಪ್ರತಿಯೊಬ್ಬರೂ ಪ್ರತಿಭಟನೆ ಮಾಡುತ್ತಿದ್ದಾರೆ. ಈ ದಿವಸ ಅಗ್ಗದ ದರದಲ್ಲಿ ಮದ್ರಾಸಿಗೂ, ಮಹಾರಾಷ್ಟ್ರಕ್ಕೂ, ಕೇರಳಕ್ಕೂ, ಗೋವಾ ಪ್ರದೇಶಕ್ಕೂ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದ ಬೆನ್ನೆಲುಬು ಎಂದು ಹೇಳುತ್ತಾ ಇರುವ ರೈತರಿಗೆ ದುಬಾರಿಯಾದ ದರವನ್ನು ಹಾಕುವುದು ಯಾವ ನ್ಯಾಯ ಎಂದು ಈವೊತ್ತು ನಮ್ಮ ರಾಜ್ಯದಲ್ಲಿ 2 ಕೋಟಿ ಇರತಕ್ಕಂಥ ಜನತೆಯನ್ನು ಆಳತಕ್ಕಂಥ ಸರ್ಕಾರವನ್ನು ನಾವು ಪ್ರತಿನಿಸಬೇಕಾಗಿದೆ. ಈ ಜನತೆಯನ್ನು ಸಮಾಧಾನ ಮಾಡುವ ಜವಾಬ್ದಾರಿ ಎರೆಕ್ಟ್ರಿಸಿಟಿ ಬೋರ್ಡ್‌ನವರಮೇರೆ ಇದೆ. ಎರೆಕ್ಟ್ರಿಸಿಟಿ ಬೋರ್ಡ್‌ನವರು ದರ ಏರಿಸಿದ್ದುದು ಮಾತ್ರವಲ್ಲದೆ ಅವರು ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡುವುದರಲ್ಲಿಯೂ ಕೂಡ ಅವ್ಯವಸ್ಥೆಯಾಗಿದೆ. ಮುಖ್ಯವಾಗಿ ಮಳೆಗಾಲದಲ್ಲಿ ಯಾವ ಹೊತ್ತಿನಲ್ಲಿ ದೀಪ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ, ಮನೆ ದೀಪ ಇರುವವರಿಗೆ ಇದರ ಅನುಭವ ಚೆನ್ನಾಗಿ ಗೊತ್ತಿದೆ. ಈವೊತ್ತಿನ ದಿವಸ ವಿದ್ಯುಚ್ಛಕ್ತಿ ಬೋರ್ಡ್‌ನವರು ಸರಿಯಾದಂಥ ವಿವರಗಳನ್ನೊಳಗೊಂಡ ಲೆಕ್ಕಪತ್ರಗಳನ್ನು ಕೊಡಬೇಕು. ಇವರು ಮಾಡಿರತಕ್ಕಂಥ ಸಾಲವಾಗಲಿ, ಅಥವಾ ಮೂಲವಾಗಲಿ ಅದನ್ನು ಯಾವುದಕ್ಕೆ ಉಪಯೋಗ ಮಾಡಿದ್ದಾರೆ. ಇಂದು ನೋಡಿದರೆ ನಮ್ಮ ಅನುಭವದ ಪ್ರಕಾರ ಪೇರಳವಾಗಿ ಸಾಮಾನುಗಳನ್ನು ಕೊಂಡುಕೊಂಡು ಜಮಾ ಮಾಡಿಟ್ಟುಕೊಂಡಿದ್ದಾರೆ. ಅದನ್ನು ಸಂಪೂರ್ಣವಾಗಿ ಉಪಯೋಗ ಕೂಡ ಮಾಡುತ್ತಾ ಇಲ್ಲ. ಸಾಮಾನ್ಯವಾಗಿ 1962-63 ನೇ ಸಾಲನ್ನಲ್ಲಿ 542.62 ಲಕ್ಷ ರೂಪಾಯಿಗಳಷ್ಟು ಸಾಮಾನುಗಳ ಸ್ಟಾಕ್ ಇತ್ತು. ಅವರ ವರದಿ ಪ್ರಕಾರ 25 ಲಕ್ಷ ರೂಪಾಯಿಗಳಷ್ಟು ಸಾಮಾನುಗಳು ನಷ್ಟವಾಗಿದೆ. ಇದು ಹೇಳಿಕೆಯೇ ಅಥವಾ 3 ವರ್ಷದಿಂದ ಸಾಮಾನುಗಳನ್ನು ಹಾಗೆಯೇ ಇಟ್ಟುಕೊಂಡು ಅದನ್ನು ಸರಿಯಾಗಿ ಉಪಯೋಗ ಮಾಡದೇ ಇದ್ದಾರೆಯೇ ಎನ್ನುವುದನ್ನು ತಿಳಿಸಬೇಕು. ಆದರೆ ಇದರ ಬಗ್ಗೆ ಬೇಕಾಗಿರುವ ಸಾಲದ ಹೊರೆಯನ್ನು ರೈತವರ್ಗದವರಮೇರೆ ಹಾಕಿದ್ದಾರೆ. ಈವೊತ್ತಿನ ದಿವಸ ಎರೆಕ್ಟ್ರಿಸಿಟಿ ಬೋರ್ಡ್‌ನವರು ಹೇಳುತ್ತಾ ಇರುವುದು ಇಡೀರಾಜ್ಯಕ್ಕೆ ಎಲ್ಲಾ ಹಳ್ಳಿಗಳಿಗೂ ಅಗಾಧವಾಗಿ ವಿದ್ಯುಚ್ಛಕ್ತಿ ಪೂರೈಕೆ ಮಾಡುತ್ತಿದ್ದೇವೆ ಎಂದು. ಆದರೆ ಅದರ ಭಾರ ರೈತ ಹೊರಬೇಕು. ಇದು ಖಂಡನೀಯವಾಗಿದೆ. ಏತಕ್ಕೆಂದರೆ ಮೊದಲನೆಯದಾಗಿ ನಾನು ಹೇಳುವುದು ನಗರಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಿದರೆ, ನಮ್ಮ ಇಡೀ ರಾಜ್ಯದ ಸಂಪತ್ತಿಗೆ ನಗರವಾಸಿಗಳಿಂದಲೇ ಕೂಡುವ ಟ್ಯಾಕ್ಸ್‌ನಿಂದ ಆಗುವುದಿಲ್ಲ ಅಥವಾ ಅವರ ಒಬ್ಬರಮೇರೆಯೇ ತೆರಿಗೆ ಹಾಕಿದರೆ ವಿದ್ಯುಚ್ಛಕ್ತಿ ಇಡೀ ರಾಜ್ಯಕ್ಕೆ ಪೂರೈಕೆ ಆಗುವುದಿಲ್ಲ. ಹಳ್ಳಿಯ ರೈತವರ್ಗದವರಮೇರೆ ಅತಿ ಕೆಳಗಿನಮಟ್ಟದ ಜೀವನವನ್ನು ನಡೆಸಿಕೊಂಡು ಬರುತ್ತಾ ಇರುವ ಜನರಮೇರೆ ಈ ತೆರಿಗೆಯ ಭಾರ ಬೀಳುತ್ತಾ ಇರುವಾಗ ಈವೊತ್ತು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಪೂರೈಕೆ, ಪಂಪುಸೆಟ್ಟು ಪೂರೈಕೆಯನ್ನು ನಾವು ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಎಲ್ಲಾ ಭಾರವನ್ನೂ ರೈತರು ಹೊರಲೇಬೇಕಾಗಿದೆ. ಪಂಪುಸೆಟ್ಟಿಗೆ ಹಾಕಿರತಕ್ಕಂಥ ದರವನ್ನು ದುಬಾರಿ ಮಾಡಬೇಕೆನ್ನುವುದು, ರೈತರು ಉಪಯೋಗ ಮಾಡತಕ್ಕಂಥ ಪವರ್‌ಗೆ ವಿದ್ಯುಚ್ಛಕ್ತಿ ದರವನ್ನು ದುಬಾರಿ ಮಾಡಬೇಕೆನ್ನುವುದು ಸರಿಯಲ್ಲ. ಈ ವಿಚಾರವನ್ನು ಎರೆಕ್ಟ್ರಿಸಿಟಿ ಬೋರ್ಡ್‌ನವರು ತೀರ್ಮಾನ ಮಾಡದೇ ಇರುವುದು ದುರದೃಷ್ಟಕರ ಎಂದು

ಹೇಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ದೇಶದ ಬೆನ್ನೆಲುಬು ಎಂದು ಹೇಳತಕ್ಕಂಥ ರೈತರನ್ನು ಮುಂದಕ್ಕೆ ತರಬೇಕಾದರೆ ಎರೆಕ್ಟ್ರಿಸಿಟಿ ಪೂರೈಕೆ ನಗರಗಳಲ್ಲಿರುವಂತೆ ಹಳ್ಳಿಗಳಲ್ಲಿಯೂ ಆಗಬೇಕು. ಮತ್ತು ಈಗ ಇರುವ ಟ್ಯಾಕ್ಸ್‌ನಲ್ಲಿ ಅರ್ಧ ದರ ಮಾಡಬೇಕು, ರೈತರ ನ್ಯಾಯವಾದ ಕೇಳಿಕೆಗೆ ಗಮನಕೊಡಬೇಕು ಎಂದು ಹೇಳುತ್ತೇನೆ. ಸರ್ಕಾರದವರೂ ಕೂಡ ಈಪೊತ್ತಿನ ದಿನಸ ಎರೆಕ್ಟ್ರಿಸಿಟಿ ಬೋರ್ಡ್‌ನವರು ಏನು ಹೇಳುತ್ತಾರೋ ಅದರಂತೆ ಕೇಳುತ್ತಿದ್ದಾರೆ. ಅವರು ಯಾವುದಾದರೂ ವಿಷಯದಲ್ಲಿ ಈ ರೀತಿಯಲ್ಲದ ಈರೀತಿ ಮಾಡಬೇಕು ಎಂದು ಹೇಳಿದರೆ ಅವಕ್ಕೆ ಒಪ್ಪಿಗೆ ಕೊಟ್ಟು ಬಿಡುತ್ತಾರೆ. ಅದುದರಿಂದ ಇಂತಹ ಸಂದರ್ಭದಲ್ಲಿ ಎರೆಕ್ಟ್ರಿಸಿಟಿ ಬೋರ್ಡ್‌ನ್ನು ಮಾತ್ರವಲ್ಲದೆ ಸರ್ಕಾರವು ನೀತಿಯನ್ನೂ ಖಂಡನೆ ಮಾಡಬೇಕಾಗಿದೆ. ಇದರಿಂದ ರೈತನು ದಾರಿಗೆ ಬಳುವಮಟ್ಟಿಗೆ ಅವಕಾಶವಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಅದುದರಿಂದ ನಾನು ಈಗ ಹೇಳುವುದು ರೈತರಿಗೆ ಕೊಡುವ ಪಂಪುಸೆಟ್ಟಿನಮೇಲೆ ಹಾರ್ಸ್ ಪವರ್ ಮೇಲೆ ಏನು ದರ ಹಾಕಿದ್ದೀರಿ ಅದನ್ನು ಕಡಿಮೆ ಮಾಡಬೇಕು ಅಂದರೆ ಅರ್ಧ ದರ ಮಾಡಬೇಕು ಇಲ್ಲವೇ ಕಡೇ ಪಕ್ಷ ಹಿಂದೆ ಇರುವ ದರದಲ್ಲಾದರೂ ಮುಂದುವರಿಸಬೇಕೆಂದು ಹೇಳುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಅಧ್ಯಕ್ಷರೆ, ಮೈಸೂರು ರಾಜ್ಯದ ವಿದ್ಯುಚ್ಛಕ್ತಿಯನ್ನು ಮಂಡಲಿಯು ಮನಸ್ಸೋಚ್ಛೆಯಾಗಿ ರಾಜ್ಯಭಾರ ಮಾಡುವುದಕ್ಕೆ ಪ್ರಾರಂಭ ಮಾಡಿದೆ. ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿ ಇದಕ್ಕಿಂತ ಹಿಂದೆ ಮೈಸೂರು ರಾಜ್ಯ ಸರ್ಕಾರ ಒಂದು ಇರಾಖೆಯಾಗಿ ಕೆಲಸ ಮಾಡುತ್ತಿತ್ತು. ಆ ಕಾಲದಲ್ಲಿ ನಡೆಯುತ್ತಿದ್ದ ವ್ಯವಹಾರಕ್ಕೂ ಈ ಒಂದು ಮಂಡಲಿ ಆದಮೇಲೆ ಆಗುತ್ತಾ ಇರತಕ್ಕಂಥ ವ್ಯವಹಾರಕ್ಕೂ ಹೋಲಿಸಿ ನೋಡಿದರೆ ಈ ಮಂಡಲಿ ಆದಮೇಲೆ ಪರಿಸ್ಥಿತಿ ತುಂಬಾ ಹದಗೆಟ್ಟಿದೆ ಎಂದು ಹೇಳಬಹುದು. ಈ ಮಂಡಲಿ ಹೆಸರಿನಲ್ಲಿ ನಡೆಯುತ್ತಾ ಇರತಕ್ಕಂಥ ದುಂದುವೆಚ್ಚ ಮತ್ತು ಅದರಲ್ಲಿ ಆಗತಕ್ಕಂಥ ಸಾಮಾನಿನ ಅಪಹರಣ ಮತ್ತು ಅನಾವಶ್ಯಕವಾದ ಸಿಬ್ಬಂದಿಗೆ ಹೆಚ್ಚು ಖರ್ಚು ಮಾಡುತ್ತಾ ಇರುವುದು ಈ ಎಲ್ಲಾ ರೀತಿಯಿಂದಾಗಿ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಅಪಾರ ನಷ್ಟವಾಗುತ್ತಾ ಇದೆ. ಆದುದರಿಂದ ಈ ನಷ್ಟವನ್ನು ತುಂಬಿಸಲಕ್ಕೆ ಸರ್ಚಾರ್ಜು ಕೊಡಬೇಕು ಅಲ್ಲದೆ ವಿದ್ಯುತ್ ಪಂಪ್ ಸೆಟ್ಸ್‌ನ್ನು ಉಪಯೋಗಿಸತಕ್ಕಂಥವರು ಮಿನಿಮಮ್ ಛಾರ್ಜು ಜಾಸ್ತಿ ಕೊಡಬೇಕು, ಇತ್ಯಾದಿ, ಇತ್ಯಾದಿ ಕೊಡಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಈರೀತಿ ಬೋರ್ಡ್‌ನವರು ಜನತೆಯಿಂದ ಕೊಡಿಸುವುದಕ್ಕೆ ಬಹಳ ಹಾಣರು, ಬುದ್ಧಿವಂತರೂ ಆಗಿದ್ದಾರೆ. ಮತ್ತು ಅವರಿಗೆ ಉತ್ತರ ಕೊಡುವ ಶಕ್ತಿಯೂ ಕೂಡ ರಾಜ್ಯಸರ್ಕಾರದ ಮಂತ್ರಿಗಳಿಗಿಲ್ಲ. ಅವರು ಸರ್ಕಾರಕ್ಕೆ ಹೇಳುತ್ತಾರೆ ನಮಗೆ ಲಾಸ್ ಆಗುತ್ತಾ ಇದೆ, ನೀವೂ ಕೂಡ ನಮಗೆ ಏನೂ ಕೊಡುತ್ತಾ ಇಲ್ಲ ಲಾಸ್ ಆದರೆ ನಮಗೆ ವಿದ್ಯುಚ್ಛಕ್ತಿಯ ಆಡಳಿತ ನಡೆಸಲು ಕಷ್ಟವಾಗುತ್ತದೆ ಹೀಗೆಲ್ಲಾ ಹೇಳಿ ಈರೀತಿ ಮಾಡಬೇಕು ಎಂದು ಹೇಳಿದರೆ ಹಾಗೆ ಮಾಡಿರಿ ಎಂದು ಮಂತ್ರಿಗಳು ಹೇಳುತ್ತಾರೆ. ಶ್ರೀಮಾನ್ ಶಿವಪ್ಪನವರು ಹೇಳಿದರು, ಶ್ರೀಮಾನ್ ಪರಮೇಶ್ವರಪ್ಪನವರು ಮೊದಲು ಈ ಕಡೆಯಲ್ಲೇ ಇದ್ದವರು, ಅವರಿಗೆ ಸೋಷಿಯಾಲಸಮ್ ಎಲ್ಲಾ ಗೊತ್ತು ಎಂದು ಈಗ ಶ್ರೀಮಾನ್ ಪರಮೇಶ್ವರಪ್ಪನವರು ಆಳುವ ಪಕ್ಷದೊಳಗೆ ಸೇರಿಕೊಂಡು ಮಂತ್ರಿಗಳಾಗಿದ್ದಾರೆ. ಅವರು ಈ ದಿನ ರೈತರ ಬಗ್ಗೆ ಏನು ಯೋಜನೆ ಮಾಡುತ್ತಿಲ್ಲ. ಏತಕ್ಕೆಂದರೆ ಅವರು ಈಗ ಅಧಿಕಾರದಲ್ಲಿದ್ದಾರೆ, ಅವರಿಗೆ ಬಂಗಲೆ ಸುಲಭವಾಗಿ ಸಿಕ್ಕಿದೆ, ಆದ್ದರಿಂದ ಅವರಿಂದ ನಾವು ಈಗ ಹೆಚ್ಚಿನ ಪ್ರತಿಫಲ ನಿರೀಕ್ಷೆ ಮಾಡುವುದು ತಪ್ಪಾಗುತ್ತದೆ. ಈ ದಿನ ಈ ರೀತಿ ದರವನ್ನು ಹೆಚ್ಚುವಾಡಲಕ್ಕೆ ಬೋರ್ಡಿನ ಆಡಳಿತವೇ ಕಾರಣ ಎಂದು ಹೇಳಬಹುದು. 20 ವರ್ಷಗಳಿಂದ ಹಿಂದೆಯೂ ಕೂಡ ನೀರಾವರಿ ಪಂಪುಸೆಟ್ಟುಗಳು ಇತ್ತು. ಕೋಲಾರ ಜಿಲ್ಲೆಯಲ್ಲಿ ಮೊಟ್ಟಮೊದಲು ಇದು ಪ್ರಾರಂಭವಾಯಿತು. ಆಗಿನ ಕಾಲದಲ್ಲಿ ಇದಕ್ಕೆ ಮಿನಿಮಮ್ ಛಾರ್ಜಸ್ ಒಂದು ತಿಂಗಳಿಗೆ ಒಂದು ರೂಪಾಯಿ ಇತ್ತು. ಆಮೇಲೆ ವಿದ್ಯುಚ್ಛಕ್ತಿ ಬೋರ್ಡ್ ಆದಮೇಲೆ ಒಂದು ರೂಪಾಯಿ ಇದ್ದ ಛಾರ್ಜನ್ನು 2 ರೂಪಾಯಿ ಮಾಡಿದ್ದಾರೆ. ಈಗ 4 ರೂಪಾಯಿ ಮಾಡಿದ್ದಾರೆ. ಮೂಕ ಪ್ರಾಣಿಗಳ ಹಾಗಿರುವ ರೈತರಿಗೆ ಸಂಘಟಿತ ಶಕ್ತಿಯಿಲ್ಲ, ಆದುದರಿಂದ ಏನು ಬೇಕಾದರೂ ಮಾಡಬಹುದು ಎಂದು ಛಾವಿಸಿರುವಂತಿದೆ. ಹೀಗೆಯೇ ಬಿಟ್ಟರೆ ಮುಂದಿನ ವರ್ಷ 8 ರೂಪಾಯಿ ಮಾಡುವರು.

ಇನ್ನು ನಷ್ಟವಾಗುವುದಕ್ಕೆ ಅನೇಕ ಕಾರಣಗಳಿವೆ, 9–10 ರೂಪಾಯಿ ಬಡ್ಡಿ ಕೊಟ್ಟು ಬ್ಯಾಂಕುಗಳಿಂದ ಸಾಲ ತೆಗೆದು 6 ರೂಪಾಯಿ ಬಡ್ಡಿಗೋ ಏನೋ ಅಷ್ಟೇ ಬ್ಯಾಂಕಿನಲ್ಲಿ ಸಾಲದ ಹಣವನ್ನಿಡುವರು. ವಿದ್ಯುತ್ ಮಂಡಲ ಅಧಿಕಾರಿಗಳಿಗೂ ಮತ್ತು ಬ್ಯಾಂಕುಗಳಿಗೂ ಏನು ಸಂಬಂಧವಿದೆಯೋ ಅರ್ಥವಾಗುವುದಿಲ್ಲ. ಹೀಗೆ ನಷ್ಟಮಾಡಿಕೊಂಡು ಅದನ್ನು ರೈತರು ಹೊರಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳವರು ಮುಖ್ಯ ಮಂತ್ರಿಗಳ ಬಳಿಗೆ ಹೋಗಿ

(ಶ್ರೀ ಪಿ. ವೆಂಕಟಗಿರಿಯಪ್ಪ)

ಹೇಳಿದರೆ ಪಂಪುಸೆಟ್ಟು ಹಾಕುವವರು ಅನುಕೂಲವಾಗುತ್ತಾರೆ, ಅವರಿಗೆ ಕಡಿಮೆ ದರ ವಿಧಿಸಬೇಕು ಎಂದು ಹೇಳುವುದರಲ್ಲಿ ಏನೂ ನ್ಯಾಯವಿಲ್ಲ ಎಂದು ಹೇಳಿದರು. ಇಂದು ಕೋಲಾರ ಜಿಲ್ಲೆಯಲ್ಲಿರುವ 83 ಸಾವಿರ ಪಂಪುಸೆಟ್ಟುಗಳಲ್ಲಿ 15,277 ಕ್ಕೆ ವಿದ್ಯುತ್ ಮಂಡಲಿ ಅಂಕಿಯ ಪ್ರಕಾರ ದರ ಜಾಸ್ತಿಯಾಗಿದೆ. ಇದರಲ್ಲಿ ಮುಕ್ಕಾಲು ಭಾಗ ಬಾವಿಗಳಿಗೆ ಹಾಕಿರುವುದಿದೆ. 60-70 ಭಾಗ ಬಾವಿಗಳಿಗೆ ಮಿನಿಮಂ 2 ರೂಪಾಯಿದೆ, ಖರ್ಚುಮಾಡಲು ಬಾವಿಗಳಲ್ಲಿ ನೀರು ಕೂಡ ಇಲ್ಲ. ಭಾವಿ ತೋಡಲು ಸಾಲ ಮಾಡಿ ಪಂಪುಸೆಟ್ಟು ಪಡೆಯಲು ಸಾಲ ಮಾಡಿ ವ್ಯವಸಾಯಮಾಡಲು ಹೊರಟಿರುವಾಗ ಬಾವಿಗಳಲ್ಲಿ ನೀರೇ ಇಲ್ಲವಾಗಿದೆ. ಮಳೆ ಬಂದಾಗ ನೀರಿರುವುದು, ನಂತರ ಯಾವ ಬೆಳೆಗೂ ನೀರು ದೊರೆಯುವುದಿಲ್ಲ. ಕೇಗಿರುವಾಗ ಮಿನಿಮಂ 3 ಎಚ್. ಪಿ. ಮೋಟಾರ್ ಇಟ್ಟಿರುವವರಿಗೆ ಮೊದಲು ವರ್ಷಕ್ಕೆ 72 ರೂಪಾಯಿ ಛಾರ್ಜು ಬೀಳುತ್ತಿತ್ತು, ಈಗ ಹೊಸ ನೀತಿ ಪ್ರಕಾರ 144 ರೂಪಾಯಿ ಕೊಡಬೇಕು, ಎಷ್ಟು ಕರೆಂಟು ಖರ್ಚಾದರೂ ಕೊಡಬೇಕು ; ದೇವರಿಗೆ ಮುಡುಪು ಕೊಟ್ಟಂತಾಗಿ ಮಂಡಲಿಗೆ ಕೊಡಬೇಕು. ಇದಕ್ಕೇನು ಕಾರಣ ? ಹತ್ತಾರು ವರ್ಷಗಳಿಂದ ವಿದ್ಯುಚ್ಛಕ್ತಿ ಬೋರ್ಡ್ ಆಗುವುದಕ್ಕೆ ಮುಂಚಿನಿಂದಲೂ ಪಂಪು ಹಾಕಿರುವವರಿದ್ದಾರೆ. ಈಗ ಬೋರ್ಡ್ ಆಗಿದೆ, ಅದಕ್ಕೆ ಛೇರ್ಮನ್ ಇದ್ದಾರೆ, ಸಿಬ್ಬಂದಿ ಇದೆ, ಅದಕ್ಕೆ ಜಾಸ್ತಿ ಕೊಡಬೇಕು, ಖರ್ಚು ಜಾಸ್ತಿ, ಆದುದರಿಂದ 2 ರೂಪಾಯಿ ಕೊಡಬೇಕು. ಬೋರ್ಡ್ ಆದಮೇಲೆ ಕಾಲು ಹಾಕಿಲ್ಲ, ಹಿಂದೆ ಹಾಕಿದ್ದೀರಿ, ಆದರೂ ಜಾಸ್ತಿ ದರ ಕೊಡಬೇಕು ಎಂದು ಹೇಳಿದರೆ ಹೇಗೆ ? ನಿಮ್ಮನ್ನು ಕೇಳುವವರು ಯಾರೂ ಇಲ್ಲವೇ ? ಇಂದು ಕೋಲಾರ ಜಿಲ್ಲೆ ಪರಿಸ್ಥಿತಿ ನೋಡಿದರೆ ಅಲ್ಲಿ ಬೇರೆ ಭಾಗಗಳಿಗಿಂತ ಬಹಳ ಕಡಮೆ ಮಳೆ ಬರುವುದು ; 24 ಇಂಚು ಮಳೆ ಬರುವುದು, ಅಲ್ಲಿ 2-3 ವರ್ಷಗಳಿಗೊಂದು ಬೆಳೆಯಾಗುವುದು ; ಕೆಲವು ವೇಳೆ ಬೆಳೆ ಪೂರ್ಣವಾಗಿ ನಾಶವಾಗುವುದು, ಅಲ್ಲಿ ಬಾವಿಯೇ ಆಧಾರ ಮತ್ತು ನೀರಿಲ್ಲದೆ ಬೋರ್‌ವೆಲ್ ಹಾಕಿ ಭೂಮಿಯಾದ ಅಧಾರವಿಲ್ಲದೆ ವ್ಯವಸಾಯಾಭಿವೃದ್ಧಿ ಮಾಡಲು ಸಾಧ್ಯ. ಹಸಿರು ಕ್ರಾಂತಿಗೆ ಸಹಾಯಮಾಡುವುದಾಗಿ ಕೋಲಾರ ಜಿಲ್ಲೆಯವರಿಗೆ ಭರವಸೆ ಕೊಟ್ಟು, ಸರಕಾರ ದರ ಹೆಚ್ಚಿಸುವ ನೀತಿ ಅನುಸರಿಸುತ್ತಿದೆ. ನಾವೇನು ಮಾಡುತ್ತೀವಿ, ಮುಂಡಲಿ ಮಾಡಿದೆ ಎಂದು ಸರಕಾರ ಹೇಳಬಹುದು. ಆದರೆ ಸರಕಾರಕ್ಕೂ ಮುಂಡಲಿಗೂ ಸಂಬಂಧವಿಲ್ಲವೇ ? ಮುಂಡಲಿಯಲ್ಲಿರುವ ಅಸೆಟ್ಸ್ ನಮ್ಮ ರಾಜ್ಯದ್ದು, ಸರಕಾರದವರು ಸಾಲ ಕೊಡುವ ಗ್ಯಾರಂಟಿ ಕೊಡಬೇಕು. ಹೀಗಿರುವಾಗ ಬೋರ್ಡ್ ಏನು ಮಾಡಿದರೂ ಸರಕಾರ ಏನು ಸಿದ್ಧೇಶ ಕೊಡಲೂ ಸಾಧ್ಯವಿಲ್ಲವೆಂದರೆ ಅದು ಬಹಳ ಅವಮಾನದ ವಿಷಯ ; ಕ್ಷೋಭಾಯುಮಾನವಾದ ವಿಷಯವಲ್ಲ.

ಕೋಲಾರ ಜಿಲ್ಲೆಯಮಟ್ಟಿಗೆ ಹೇಳುವುದಾದರೆ ಅಲ್ಲಿರುವ ಬಾವಿಗಳಲ್ಲಿ ಮುಕ್ಕಾಲು ಭಾಗದ ಬಾವಿಗಳಲ್ಲಿ ನೀರು ಕಡಮೆ, ರೈತರಿಗೆ ಮಿನಿಮಂ ಜಾಸ್ತಿಯಿದ್ದರೆ ತುಂಬಾ ತೊಂದರೆಯಾಗುವುದು ಮತ್ತು ವ್ಯವಸಾಯಾಭಿವೃದ್ಧಿಗೂ ತೊಂದರೆಯಾಗುವುದು. ಆದುದರಿಂದ ಯಾವುದೇ ಕಾರಣದಿಂದ ಮಿನಿಮಂ ದರವನ್ನು ಹೆಚ್ಚಿಸಬಾರದು ಎಂದು ಒತ್ತಾಯಮಾಡುತ್ತೇನೆ. ನಾವೇನೇ ಹೇಳಿದರೂ ಮುಂಡಲಿಯ ಛೇರ್ಮನ್‌ನವನ್ನು ಬದಲಾಯಿಸುವುದಕ್ಕಾಗುವುದಿಲ್ಲ ಎಂದು ಹೇಳುವುದು ಸೂಕ್ತವಲ್ಲ. ಈಗ ಸಿವಿರ್. ಪಿ. ಡಬ್ಲ್ಯು. ಇಲಾಖೆಯಿದೆ, ಪ್ರದೇಶದಲ್ಲಿ ಎಲ್ಲಾದರೂ ಒಂದು ಅಣೆಕಟ್ಟು ಕಟ್ಟಬೇಕಾದರೆ ಆ ಇಲಾಖೆಯ ಎಂಜಿನಿಯರು ಹೋಗಬೇಕು, ಕಟ್ಟಿಸಬೇಕು. ಆದರೆ ಆ ಸಿವಿರ್ ಇಲಾಖೆಯ ಕೆಲಸವನ್ನು ರೆಗ್ಯುಲರ್ ಪಿ. ಡಬ್ಲ್ಯು. ಡಿ. ಮಾಡಬಹುದಾಗಿತ್ತು. ಹಾಗೆ ಮಾಡದೆ ಒಬ್ಬ ಸೂಪರಿಂಟೆಂಡಿಂಗ್ ಎಂಜಿನಿಯರು, ಚೀಫ್ ಎಂಜಿನಿಯರು ಮುಂತಾದವರನ್ನು ಅನಾವಶ್ಯಕವಾಗಿ ಸಿವಿರ್ ಇಲಾಖೆಗೆ ಹಾಕಿ ಹಣ ಪೋಲುಮಾಡುವುದನ್ನು ನಿಲ್ಲಿಸಿದರೆ ಈ ಇಲಾಖೆಯುಂದಾಗುವ ನಷ್ಟವನ್ನು ಕಡಮೆಮಾಡುವುದಕ್ಕೆ ಖಂಡಿತ ಸಾಧ್ಯವಾಗುತ್ತದೆ. ರಾಜ್ಯದ ವಿದ್ಯುಚ್ಛಕ್ತಿ, ಮುಂಡಲಿಯ ಮುರಾಡಳಿತ, ಅನಾವಶ್ಯಕವಾದ ಸಿಬ್ಬಂದಿ ಮುಂತಾದ್ದು ಅದರ ನಷ್ಟಕ್ಕೆ ಕಾರಣವಾಗಿದೆ. ಕೆಲವು ಕಡೆ ಸಿಮೆಂಟ್ ಪೋಲ್ಸ್ ಹಾಕುತ್ತಿದ್ದಾರೆ. ಜಾಸಗಿಯವರು ಕೆಲವು ಸಿಮೆಂಟ್ ಪೋಲ್ಸ್‌ಗೆ ಮುಂಡಲಿಯವರು ಖರ್ಚುಮಾಡುವುದರ ಅರ್ಧ ಖರ್ಚಿನಲ್ಲಿ ತಾವೆ ಸಿಮೆಂಟು ಕಂಬಗಳನ್ನು ಸರಬರಾಜು ಮಾಡುವುದಕ್ಕೆ ಸಿದ್ಧ ಎಂದು ಹೇಳುತ್ತಾರೆ. ಅನಾವಶ್ಯಕವಾಗಿ ಯಾರಿಗೋ ಕೆಲಸಕೊಡಿಸುವುದಕ್ಕೆ ಸಹಾಯಮಾಡುವುದಕ್ಕೆ ಮುಂಡಲಿ ದೊಡ್ಡದಾಗಿ ಸಿಮೆಂಟ್ ಪೋಲ್ಸ್ ತಯಾರಿಸುವ ಒಂದು ದೊಡ್ಡ ಕಾರ್ಖಾನೆ ತೆರೆದಿದ್ದಾರೆ. ನಿಜವಾಗಿಯೂ ಒಂದೊಂದು ಪೋಲನ್ನು ತಯಾರಿಸಲು ಎಷ್ಟು ಖರ್ಚಾಗಿದೆ ಎಂದು ಮುಂಡಲಿಯು ಲೆಕ್ಕಾಚಾರ ಮಾಡಲಿ. ಖಾಸಗಿಯವರು ಕಡಮೆ ಖರ್ಚಿನಲ್ಲಿ ಒದಗಿಸುವುದಾದರೆ ಮುಂಡಲಿ ತಯಾರಿಸುವುದನ್ನೇಕೆ ಕೈಬಿಡಬಾರದು ? ಮುಂಡಲಿಗೆ ವ್ಯವಹಾರ ದೊಡ್ಡದಾಗಿರಬೇಕು, ಬೇಕಾದವರಿಗೆ ಆಫೀಸರ ಕೆಲಸ ಕೊಡಲು ಅಧಿಕಾರವಿರಬೇಕು, ಅದನ್ನು ಕಡಮೆ ಮಾಡಿಕೊಳ್ಳಲು ತಯಾರಿಲ್ಲ. ಆದುದರಿಂದ ವಿದ್ಯುತ್ ಮುಂಡಲಿಗೆ ನಷ್ಟ

ವಾಗುತ್ತಿದೆ. ಇದರಿಂದ ಅನಾವಶ್ಯಕವಾಗಿ ದುಂದು ವೆಚ್ಚವಾಗುತ್ತಿದೆ. ಆ ನಷ್ಟವನ್ನು ರೈತರ ಮೇಲೆ ಹಾಕುತ್ತಿದ್ದಾರೆ. ಬರಗಾಲ ಪೀಡಿತ ಪ್ರದೇಶವೆಂದು ಹೆಸರು ವಾಸಿಯಾಗಿರುವ ಕೋಲಾರ ಜಿಲ್ಲೆಯ ರೈತರಮೇಲೆ ಹೆಚ್ಚಿಸಿರುವ ಮಿನಿಮಂ ದರವನ್ನು ಹಾಕಿದರೆ ತೀವ್ರ ವಿರೋಧವನ್ನು ವ್ಯಕ್ತಪಡಿಸಬೇಕಾಗುತ್ತದೆ.

6-00 P.M.

ಈಗಾಗಲೇ ಕೋಲಾರ ಜಿಲ್ಲೆಯ ಎರಡ್ಮೂರು ತಾಲ್ಲೂಕು ಕೇಂದ್ರಗಳಲ್ಲೂ ಸರ್ಕಾರದ ಮತ್ತು ಮಂಡಲಿಯ ಕ್ರಮದ ವಿರುದ್ಧ ಅಲ್ಲಲ್ಲಿ ಒಂದು ದಿವಸದ ಉಪವಾಸ ಸತ್ಯಾಗ್ರಹ ಮತ್ತು ಬಹಿರಂಗ ಸಭೆಗಳ ಮುಖಾಂತರ, ಪೋಸ್ಟ್ ಕಾರ್ಡ್ ಮುಖಾಂತರ ಮುಖ್ಯ ಮಂತ್ರಿಗಳ ಮತ್ತು ಮಂಡಲಿಯ ಅಧ್ಯಕ್ಷರ ಗಮನವನ್ನು ಸೆಳೆದಿದ್ದಾರೆ. ಶಾಂತ ರೀತಿಯಲ್ಲಿ, ಪ್ರಜಾಪ್ರಭುತ್ವ ರೀತಿಯಲ್ಲಿ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡಿದ್ದಾರೆ. ಕೋಲಾರ ಜಿಲ್ಲೆಯ ಮತ್ತು ಬೆಂಗಳೂರು ಜಿಲ್ಲೆಯ ಜನ ಏನೇ ಮಾಡಿದರೂ ಕೂಡ ನಮ್ಮನ್ನೆ ಇರುವ ಕಾಲ ಮುಗಿದುಹೋಗಿದೆ. ಅದರ ವಿರುದ್ಧ ಚಳುವಳಿ ಮಾಡುವುದಕ್ಕೆ ಖಂಡಿತವಾಗಿಯೂ ತಯಾರಾಗಿದ್ದಾರೆ. ಮತ್ತು ಸಾವಿರಾರು ಜನ ಜೈಲಿಗೆ ಹೋಗುವುದಕ್ಕೂ ಕೂಡ ತಯಾರಾಗಿದ್ದಾರೆ. ಅಲ್ಲದೆ ತಮ್ಮ ಆಫೀಸುಗಳ ಮುಂದೆ ಪಿಕೆಟಿಂಗ್ ಮಾಡುವುದು ಮುಂತಾದ ರೀತಿಯನ್ನನುಸರಿಸಿ ನಿಮ್ಮ ಸರ್ವಾಧಿಕಾರ ಖಂಡಿತವಾಗಿಯೂ ನಡೆಯದಹಾಗೆ ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತಾರೆ ಎಂದು ಹೇಳಿ ಈ ಸಂದರ್ಭದಲ್ಲಿ ಸರ್ಕಾರದವರಿಗೂ ಮತ್ತು ವಿದ್ಯುಚ್ಛಕ್ತಿ ಮಂಡಲಿಯವರಿಗೂ ಎಚ್ಚರಿಕೆ ಕೊಡ ಬಯಸುತ್ತೇನೆ. ಮಿನಿಮಂ ಚಾರ್ಜಸ್‌ನ್ನು ಯಾವುದೇ ಕಾರಣದಿಂದಲೂ ಕೂಡ ಜಾಸ್ತಿ ಮಾಡ ಬಾರದು. ಹಾಗೆ ಮಾಡಿದ್ದೇ ಆದರೆ ರೈತರಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ ಅಲ್ಲದೆ ವ್ಯವಸಾಯಾಭಿವೃದ್ಧಿ ಕೆಲಸವೂ ಕೂಡ ಕುಂಠಿತವಾಗುತ್ತದೆ ಎಂಬ ವಿಚಾರವನ್ನು ವಿರೋಧ ಪಕ್ಷದವರು ಮಾತ್ರವಲ್ಲಿ ಕಾಂಗ್ರೆಸ್ ಪಕ್ಷದವರೂ ಕೂಡ ಹೇಳಿದ್ದಾರೆ ಮತ್ತು ಅವರೂ ಕೂಡ ಇದಕ್ಕೆ ವಿರೋಧವಾಗಿದ್ದಾರೆ. ಆದ್ದರಿಂದ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಇದೆ ಅಂತ ಅನ್ನುವುದಾದರೆ ಸದಸ್ಯರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಮಿನಿಮಂ ಚಾರ್ಜಸ್ ಹೆಚ್ಚು ಮಾಡಿರುವ ಆಜ್ಞೆಯನ್ನು ತಕ್ಷಣ ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಹಾಗೆ ಮಾಡದೇ ಹೋದಲ್ಲಿ ಪ್ರಬಲವಾದ ಒಂದು ಚಳವಳಿ ನಡೆದು ಬಹಳ ಹಾನಿಯುಂಟಾಗುತ್ತದೆ. ರೈತರ ಒಂದು ಶಕ್ತಿಯನ್ನು ಪರೀಕ್ಷೆ ಮಾಡುವುದಕ್ಕೆ ಹೋಗಬೇಡಿ ಎಂದು ಸರ್ಕಾರದವರಿಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂತಹ ಪ್ರಾಮುಖ್ಯವಾದ ವಿಷಯ ಚರ್ಚೆಯಾಗತಕ್ಕ ಕಾಲದಲ್ಲಿ ಸರ್ಕಾರದ ವತಿಯಿಂದ, ಇವರುಮೇಲೆ ಅವರಿಗೆ ಅಭಿಮಾನ ಇದ್ದರೆ ಮಾನ್ಯ ಮಂತ್ರಿಗಳು ಕುಳಿತು ಮಾನ್ಯ ಸದಸ್ಯರು ಏನು ಸಲಹೆ ಮಾಡುತ್ತಾರೆ ಎಂಬುದನ್ನು ಕೇಳಿ ಸೂಕ್ತವಾದ ಉತ್ತರ ಕೊಡುವುದು, ಕಾರ್ಯಕ್ರಮ ತೆಗೆದುಕೊಳ್ಳುವುದು ಸ್ವಾಭಾವಿಕ. ನಂಬಿಂಥಿಟ್ಟ ಮಾನ್ಯ ಮಂತ್ರಿಗಳು ಇಲ್ಲದೇ, ಯಾರಾದರೂ ಇರುತ್ತೇವೆ ಅಂತ ಹೇಳಿದ ಪಕ್ಷದಲ್ಲಿ ಇದರ ಬಗ್ಗೆ ಕಾತುರತೆ ಸರ್ಕಾರಕ್ಕೆ ಇಲ್ಲ ಅಂತ ಅನ್ನುವುದು ಇದರಿಂದಲೇ ವ್ಯಕ್ತವಾಗುತ್ತದೆ. ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯಭಾರದ ವಿಷಯ ಈಗ ಚರ್ಚೆಯಲ್ಲಿ ಇದೆ. ವಿದ್ಯುಚ್ಛಕ್ತಿ ಮಂಡಲಿ ವ್ಯಾಪಾರಿ ಸಂಸ್ಥೆಯಾಗಿರುವುದರಿಂದ ಲಾಭ ಮತ್ತು ನಷ್ಟ ಈ ಎರಡೂ ಇಲ್ಲದೇ ನಡೆಸಿಕೊಂಡು ಹೋಗಬೇಕು ಎಂದು ಅನ್ವತಕ್ಕ ಒಂದು ಸಂಸ್ಥೆಯಾಗಿ ಮಾಡಲಾಯಿತು. ವಿದ್ಯುಚ್ಛಕ್ತಿ ಮಂಡಲಿಗೂ ಸರ್ಕಾರಕ್ಕೂ ಈಗ ಅನೇಕ ರೀತಿಯಲ್ಲಿ ಬಾಂಧವ್ಯ ಇದೆ. ಈ ಮಂಡಲಿ ಸರ್ಕಾರದ ಒಂದು ಅಂಗ—ಒಂದು ಎಕ್ಸಿಕ್ಯೂಟೀವ್ ಲಿಂಕ್, ಇದು ಶಾಸನದ ಪ್ರಕಾರ ಆಗಿದೆ. ಇದು ಸರ್ಕಾರದ ಸಂಸ್ಥೆ, ಸರ್ಕಾರ ತನ್ನ ಧೋರಣೆ ಏನಿದೆ ಅದನ್ನು ತಾನು ನೇರವಾಗಿ ಇಂಪ್ಲಿಮೆಂಟ್ ಮಾಡುವುದರ ಬದಲು ಒಂದು ಕಾರ್ಪೊರೇಷನ್ ಮಾಡಿ ಅದರ ಮುಖೇನ ವ್ಯವಹಾರ ನಡೆಸುವುದಕ್ಕೆ ಮಾಡಿರತಕ್ಕ ಒಂದು ವ್ಯವಸ್ಥೆ ಇದು. ಆದ್ದರಿಂದ ಸರ್ಕಾರದ ನೀತಿ, ಧೋರಣೆ ಏನಿದೆ ಆ ಧೋರಣೆಗಳ ಆಯಕಟ್ಟಿಗೆ ಒಳಪಟ್ಟು ಇದು ಕೆಲಸ ಮಾಡಬೇಕು. ಅಡಳಿತದವರಿಗೆ ನೀವು ನಷ್ಟ ಹೊಂದಕೂಡದು, ಲಾಭ ಹೆಚ್ಚು ಮಾಡಕೂಡದು ಆ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡು ಹೋಗತಕ್ಕದ್ದು, ಮಾಡಿದರೆ ಲಾಭ ಮಾಡಿ, ನಷ್ಟವಾತ್ರ ಆಗಕೂಡದು ಎಂಬ ಒಂದು ನಿಯಮವನ್ನು ಹಾಕಿದ್ದಾರೆ. ನಾವು ಒಂದು ಕಡೆ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿ ಹರಿದು ಜನ ಜೀವನ ಉತ್ತಮಗೊಳ್ಳಬೇಕು, ಆಹಾರದ ಉತ್ಪಾದನೆಯಾಗಬೇಕು, ದೇಶದಲ್ಲಿ ಸಮೃದ್ಧಿಯಾಗಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ, ಇನ್ನೊಂದು ಕಡೆ ಲಾಭ ಬಂದಹೊರತು ಕೆಲಸ ಮಾಡಬಾರದು ಎಂಬ ಉದ್ದೇಶವನ್ನು

(ಶ್ರೀ ಹೆಚ್. ಎಂ.ಚನ್ನಬಸಪ್ಪ)

ಇಟ್ಟುಕೊಂಡಿದ್ದೇನೆ. ಈ ಎರಡರ ಸಮನ್ವಯದಿಂದ ಕೆಲಸ ಮಾಡುವುದು ಕಷ್ಟ. ಆದ್ದರಿಂದ ಸರ್ಕಾರದ ಈ ನೀತಿಯಲ್ಲೇ ಬದಲಾವಣೆಯಾಗಬೇಕೆಂದು ನಾನು ಸಲಹೆ ಮಾಡುತ್ತೇನೆ.

ಒಂದು ಕಡೆ ಶಾಖಾಪತಿಯಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡಿ ಅದನ್ನು ಅವರು ಮಾರಾಟ ಮಾಡಬೇಕು. ಮತ್ತೊಂದು ಕಡೆ ನಾವು ಉತ್ಪಾದನೆ ಮಾಡತಕ್ಕ ವಿದ್ಯುತ್ತಿನ ಇನ್‌ಸ್ಪೆಕ್ಷನ್, ಅವರದೇ ಆಗಿದೆ. ಈ ದ್ವಿಗುಣ ನೀತಿ ಹೋಗಬೇಕು. ಇಲ್ಲವೇ ಇನ್‌ಸ್ಪೆಕ್ಷನ್, ಪ್ರೊಡಕ್ಷನ್ ಡಿಸ್ಟ್ರಿಬ್ಯೂಷನ್ ಎಲ್ಲವನ್ನೂ ವಿದ್ಯುಚ್ಛಕ್ತಿ ಮಂಡಲಗೇ ಕೊಡಿ, ಇಲ್ಲವೇ ಇನ್‌ಸ್ಪೆಕ್ಷನ್ ಎಬಾರಣೆ ಮಾಡುವುದು ಮತ್ತು ಉತ್ಪಾದನೆ ಮಾಡುವುದು ಇವಿಷ್ಟನ್ನೂ ನಿಮ್ಮ ಕೈಯಲ್ಲಿ ಮಡಗಿಕೊಂಡು, ಉತ್ಪಾದನೆಯಾದಂತಹ ವಿದ್ಯುತ್ತನ್ನು ಉತ್ಪಾದನಾ ಜಾಗದಲ್ಲಿ ನಿರ್ದಿಷ್ಟವಾದ ದರಗಳಿಗೆ ಮಂಡಲಗೆ ಮಾರಾಟ ಮಾಡಿ. ಒಂದೊಂದರಲ್ಲಿ ಒಂದೊಂದು ನೀತಿಯನ್ನು ಇಟ್ಟುಕೊಂಡಿರುವುದರಿಂದ ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ನಾನು ಒಂದು ಸಲಹೆಯನ್ನು ಕೊಡಬೇಕೆಂದಿದ್ದೇನೆ. ಸರ್ಕಾರದವರು ಈ ಹಿಂದೆ ಯಾವುದೇ ಕಾರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಆ ಒಂದು ವ್ಯವಸ್ಥೆಯನ್ನು ಮಾಡಿರಲಿ. ಆದರೆ ನಾನು ಹೇಳುತ್ತಿರುವುದು ಸರ್ಕಾರದವರೇ ಎಲ್ಲ ವಿದ್ಯುಚ್ಛಕ್ತಿಯ ಉತ್ಪನ್ನ ಕೇಂದ್ರಗಳನ್ನು ತಮ್ಮ ಕೈಯಲ್ಲಿಟ್ಟುಕೊಳ್ಳಲಿ, ಅದಕ್ಕೂ ನಾನು ಬೇಡವೆನ್ನುವುದಿಲ್ಲ. ಮುಂದೆ ಹೊಸದಾಗಿ ಕೈಗೊಳ್ಳತಕ್ಕ ವಿದ್ಯುತ್ ಕೇಂದ್ರಗಳೇನಿವೆ ಅವುಗಳನ್ನೂ ಸಹಾ ಸರ್ಕಾರದವರೇ ತಮ್ಮ ಕೈಯಲ್ಲಿಟ್ಟುಕೊಳ್ಳಲಿ, ನಾನು ಬೇಡವೆನ್ನುವುದಿಲ್ಲ. ಅವೇ ರೀತಿ ಇವುಗಳ ಇನ್‌ವೆಸ್ಟಿಗೇಷನ್ ಕೂಡ ಇವರ ಕೈಯಲ್ಲೇ ಇರಬೇಕು. ಹೀಗೆ ಯಾವುದಾದರೊಂದು ನಿರ್ದಿಷ್ಟ ನೀತಿ ಮಾತ್ರ ಇರಬೇಕೆಂದು ಹೇಳುತ್ತೇನೆ. ಹೀಗೆ ಸರ್ಕಾರದವರು ಉತ್ಪತ್ತಿಮಾಡತಕ್ಕ ವಿದ್ಯುಚ್ಛಕ್ತಿಯನ್ನು ಅವರ ಖರ್ಚಿಗಳೇನಿಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕಹಾಗೆ ಅದನ್ನು ಆ ವಿದ್ಯುಚ್ಛಕ್ತಿ ಮಂಡಲಗೆ ಮಾರಾಟ ಮಾಡಲಿ. ಸರ್ಕಾರದವರು ವಿದ್ಯುಚ್ಛಕ್ತಿ ಮಂಡಲಿಗೆ ಮಾರಾಟ ಮಾಡತಕ್ಕ ಹಣವೇನಿದೆ ಅದು ಮುಂದೆ ಸರ್ಕಾರಕ್ಕೆ ಹೊಸ ಹೊಸ ವಿದ್ಯುತ್ಸಾದನೆಗೆ ಬೆಂಬಲನೀಡತಕ್ಕ ಮಾತ್ರವಲ್ಲದಿರಬೇಕು. ಆಂದರೆ ಸರ್ಕಾರದವರು ಆ ವಿದ್ಯುಚ್ಛಕ್ತಿಯನ್ನು ಉತ್ಪನ್ನಮಾಡತಕ್ಕ ಖರ್ಚಿಗೆ ಷಟ್ಟಿಗಳಿಗೂ ಮತ್ತು ಅವರು ವಿದ್ಯುತ್ತನ್ನು ಮಾರಾಟ ಮಾಡತಕ್ಕ ದರಕ್ಕೂ ಒಂದು ಹತ್ತಿರದ ಸಂಬಂಧವಿರಬೇಕು. ಅಂಥ ಒಂದು ನೀತಿಯನ್ನು ಸರ್ಕಾರದವರು ಅನುಸರಿಸಬೇಕು ಎಂಬುದು ನನ್ನ ವಾದ. ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಿ ಗ್ರಾಮಾಂತರ ಪ್ರದೇಶಗಳನ್ನು ಅಭಿವೃದ್ಧಿಗೊಳಿಸಬೇಕಾದ್ದು ಬಹಳ ಪ್ರಾಮುಖ್ಯವಾದ ಕೆಲಸ. ಆ ಕೆಲಸ ಬಹಳ ಸಮರ್ಪಕವಾಗಿ ನಡೆಯಬೇಕು. ಅದಕ್ಕಾಗಿ ಸರ್ಕಾರದವರು ಸೂಕ್ತ ಸಲಹೆಗಳನ್ನು ಪಡೆಯುವುದಕ್ಕಾಗಿ ಒಂದು ತಜ್ಞರ ತಂಡವನ್ನು ಕರೆದು ಸಮಾಲೋಚನೆ ನಡೆಸಬೇಕಾದ್ದು ಬಹಳ ಅಗತ್ಯ. ಈ ದಿವಸ ಒಂದು ಕಡೆ ಸರ್ಕಾರದವರು ಹೇಳುತ್ತಿದ್ದಾರೆ ದೇಶದಲ್ಲಿ ಆಹಾರದ ಉತ್ಪತ್ತಿ ಹೆಚ್ಚಾಗಬೇಕು ಎಂದು. ಹಾಗೆ ಹೆಚ್ಚು ಆಹಾರವನ್ನು ಉತ್ಪಾದನೆ ಮಾಡಬೇಕಾಗಿದ್ದರೆ ಅದಕ್ಕೆ ಬಹಳ ಅವಶ್ಯಕವಾದದ್ದು ನೀರು. ಈಗಾಗಲೇ ನಮ್ಮ ಹೊಳೆಗಳಲ್ಲಿರತಕ್ಕ ನೀರು ಪೂರೈಸುತ್ತಾ ಬಂದಿದೆ: ಇನ್ನು ನಮ್ಮ ಕೆರೆಕಟ್ಟೆಗಳಲ್ಲಿರತಕ್ಕ ನೀರು ಪೂರೈಸಿದಮೇಲೆ ನಮಗೆ ನೀರು ಬೇಕಾದರೆ ನಾವು ಭೂಗರ್ಭದಲ್ಲಿರತಕ್ಕ ನೀರನ್ನೇ ಮೇಲಕ್ಕೆ ತರಬೇಕು. ಹೀಗೆ ರೈತನು ಭೂಗರ್ಭದಲ್ಲಿರತಕ್ಕ ನೀರನ್ನೆತ್ತಿ ಆಹಾರಧಾನ್ಯಗಳನ್ನು ಹೆಚ್ಚು ಹೆಚ್ಚು ಉತ್ಪನ್ನ ಮಾಡಬೇಕಾದರೆ ಅವನಿಗೆ ಹೆಚ್ಚಿನ ಖರ್ಚುಪೆಚ್ಚುಗಳು ಬರುತ್ತವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಕೆಲವರು ಕೃಷ್ಣಾಗೋದಾವರಿಯಲ್ಲಿ ನಮ್ಮ ನೀರಿಲ್ಲವೇ ಎಂದು ಕೇಳಬಹುದು. ಅದೂ ಕೂಡ ಇನ್ನು ಕೆಲವೇ ದಿನಗಳಲ್ಲಿ ನಿರ್ಧಾರವಾಗತಕ್ಕ ಸಂದರ್ಭ ಬರಬಹುದು.

ಇನ್ನು ನಮ್ಮ ಮಂತ್ರಿಗಳು ಗ್ರೀನ್ ರೆವಲ್ಯೂಷನ್ ವಿಚಾರವನ್ನೆತ್ತಿದ್ದರು. ಗ್ರೀನ್‌ರೆವಲ್ಯೂಷನ್ ಎಂದರೆ ಯಾರೋ ಒಬ್ಬ ರೈತ ಎಲ್ಲಿಯೋ ಒಂದು ಕಡೆ ತಾನು ಕಷ್ಟಪಟ್ಟು ಬೆಳೆಸಿದ್ದ ಬೆಳೆಯಹತ್ತಿರ ಹೋಗಿ ಮಂತ್ರಿಗಳು ನಿಂತು ಫೋಟೋ ತೆಗೆಸಿಕೊಂಡರೆ ಅದು ಗ್ರೀನ್ ರೆವಲ್ಯೂಷನ್ ಅಲ್ಲ. ಗ್ರೀನ್ ರೆವಲ್ಯೂಷನ್ ಎಂದರೇನು ಎಂಬುದನ್ನು ಆ ಪಂಜಾಬಿಗೆ ಹೋಗಿ ನೋಡಿದರೆ ಆಗ ವ್ಯಕ್ತವಾಗುತ್ತದೆ. ಆ ರೀತಿ ಇಲ್ಲಿ ಮಾಡುವುದಕ್ಕೆ ಹೊರಟರೆ ರೈತನಿಗೆ ತಾನು ಹಾಕಿದ ಬಂಡವಾಳಕ್ಕೆ ಬಡ್ಡಿ ಸಹಾ ಬರುವುದಿಲ್ಲ. ಆದರೆ ನಾನೀಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಮುಖ್ಯ ಸಲಹೆಯನ್ನು ಕೊಡಬೇಕೆಂದು ಎದ್ದು ನಿಂತಿದ್ದೇನೆ: ಭೂಗರ್ಭದಲ್ಲಿರತಕ್ಕ ನೀರನ್ನೆತ್ತಿ ಬೇಸಾಯ ಮಾಡಬೇಕೆಂದರೆ ರೈತನಿಗೆ ಕೆಚ್ಚು ಹಣ ಖರ್ಚಾಗುತ್ತದೆ. ಇದನ್ನು ಎಲ್ಲರೂ ಒಪ್ಪಲೇಬೇಕು. ಆ ರೈತನು ಇನ್ನಿತರೇ ತಾನು ಕೊಡಬೇಕಾದ ತೆರಿಗೆಗಳು ಮತ್ತು ವಿದ್ಯುಚ್ಛಕ್ತಿಯ ಬಗ್ಗೆ ಕೊಡತಕ್ಕ ಶುಲ್ಕ ಇವುಗಳನ್ನೆಲ್ಲಾ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಆ ರೈತನು

ಭೂಮಿಗೆ ಹಾಕಿರತಕ್ಕ ಹಣ ಅದರ ಬಡ್ಡಿ ಇಷ್ಟೆಲ್ಲಾ ಗಮನದಲ್ಲಿಟ್ಟುಕೊಂಡು ಅತನು ಬೆಳೆಯತಕ್ಕ ಧಾನ್ಯಗಳಿಗೆ ಒಂದು ನ್ಯಾಯವಾದ ಬೆಲೆಯನ್ನು ನಿಗದಿ ಮಾಡಬೇಕು ಎಂದು ಹೇಳುತ್ತೇನೆ. ಇದರಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚುಕಡಮೆ ಇದ್ದರೂ ಅದಕ್ಕೆ ನನ್ನ ಅಡ್ಡಿಯಿಲ್ಲ. ಈ ನೀತಿಗೆ ಸರ್ಕಾರದವರು ಒಪ್ಪುವುದಾದರೆ ಅವರು ಈ ವಿದ್ಯುಚ್ಛಕ್ತಿಯ ಬಗ್ಗೆ ಯಾವ ದರವನ್ನಾದರೂ ನಿಗದಿ ಮಾಡಲಿ ಅದಕ್ಕೆ ನನ್ನ ಅಡ್ಡಿಯಿಲ್ಲ. ಇದಕ್ಕೆ ನನ್ನ ಬೆಂಬಲವಿದೆ. ಆದರೆ ಈ ದಿವಸ ಸರ್ಕಾರದವರಾದರೂ ಮಾಡುತ್ತಿರುವುದೇನು ! ಒಂದು ಕಡೆ ರೈತನಿಗೆ ಹೆಚ್ಚು ಹೆಚ್ಚು ದವಸಧಾನ್ಯಗಳನ್ನು ಬೆಳೆಯಬೇಕೆಂದು ಅವನಿಗೆ ಪ್ರೋತ್ಸಾಹ ಕೊಟ್ಟುದುದಕ್ಕೆ ಆ ರೈತನು ಬೆರಗಾಗಿ ಹೆಚ್ಚು ಆಹಾರ ಉತ್ಪಾದನೆ ಮಾಡಿದಾಗ ಅವನಿಗೆ ಹೆಚ್ಚಿನ ಖರ್ಚುವೆಚ್ಚಗಳು ಬಿದ್ದಿದ್ದಾಗ ಅವನ ಧಾನ್ಯದ ಬೆಲೆಗಳು ಏಕ್‌ದಂ ಇಳಿದರೆ ಅವನ ಗತಿಯೇನು ! ಅವನನ್ನು ಕೇಳುವವರೇ ಇಲ್ಲ. ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಗಳಲ್ಲಿ ಬಹಳ ವಿವರವಾಗಿ ಮಾತನಾಡಬೇಕೆಂದಿದ್ದೇನೆ. ಅವರಿಗೆ ಯಾವಾಗ ಪುರಸತ್ತು ಇರುತ್ತದೋ ಆಗ ಅವರು ಹೇಳಿಕಳುಹಿಸಲಿ. ನಾನು ಅವರನ್ನು ಮುಖತಃ ಕಂಡು ವಿಚಾರಗಳನ್ನು ವಿವರವಾಗಿ ಹೇಳುತ್ತೇನೆ. ಆದರೆ ಪ್ರಕೃತದಲ್ಲಿ ಸರ್ಕಾರದವರು ಒಂದು ಕಡೆ ವಿದ್ಯುತ್ ದರವನ್ನು ಏರಿಸಿ, ನೀರಿನ ದರವನ್ನೂ ಹೆಚ್ಚುಮಾಡಿ ಅತ್ತ ರೈತನ ಬೆಳೆಗೆ ಹೆಚ್ಚು ಬೆಲೆಯನ್ನು ನಿಗದಿ ಮಾಡದಿರುವುದು ದೇಶದ ಆರ್ಥಿಕ, ನೀತಿಗೆ ತದ್ವಿರುದ್ಧವಾಗಿದೆ. ವಿದ್ಯುತ್ ದರಗಳಾದರೂ ಹೀಗೆ ಏರುಪ್ಪದಕ್ಕೆ ಕಾರಣವಾದರೂ ಏನು ! ಆ ವಿದ್ಯುತ್‌ಮಂಡಳಿಯಲ್ಲಿ ಅಧಿಕಾರಿಗಳ ನೌಕರರ ಸಂಬಳ ಹಾಗೂ ನೌಕರುಗಳ ವೇಜಸ್‌ಗಳು ವಿಪರೀತ ಹೆಚ್ಚಾಗಿವೆ. ಇವೆಲ್ಲವನ್ನು ಅನುಸರಿಸಬೇಕೆಂಬ ಒಂದು ನೀತಿ ಏನೆಂದರೆ ಆ ನೌಕರರ ಸಂಬಳ ಜಾಸ್ತಿಯಾಗಬೇಕು, ಅವರಿಗೆ ಕೆಲಸ ಕಡಮೆಯಾಗಬೇಕು, ಅವರಿಗೆ ಪುರಸತ್ತು ಹೆಚ್ಚಾಗಬೇಕು. ಇದು ಈ ದಿವಸ ದೇಶದಲ್ಲಿ ಎದ್ದು ಕಾಣುತ್ತಿರುವ ನೀತಿ. ಇದಕ್ಕೆ ಸರ್ಕಾರಗಳ ಪುರಸ್ಕಾರ. ನಾವು ಅವರಿಗೆ ಕೊಡತಕ್ಕ ಸಂಬಳಕ್ಕೆ ತಕ್ಕ ಕೆಲಸವನ್ನು ಮಾಡಿ ಎಂದು ಕೇಳಬಾರದಂತೆ. ಇದು ಎಂಥಾ ನೀತಿಯೋ ನಾನು ಕಾಣೆ. ಹೀಗಾಗಿ ಈ ದಿವಸ ರಾಜ್ಯದಲ್ಲಿ ಎಲ್ಲ ವಸ್ತುಗಳ ಬೆಲೆಯೂ ದಿನ ದಿನಕ್ಕೂ ಏರುತ್ತಿವೆ. ನಾನು ಈ ಸಂದರ್ಭದಲ್ಲಿ ನನ್ನ ಗಮನದಲ್ಲಿ ಕೇವಲ ಮೈಸೂರು ಸರ್ಕಾರವೊಂದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲ. ಈ ವಿಚಾರದಲ್ಲಿ ಎಲ್ಲಾ ಸರ್ಕಾರಗಳೂ ನಿಶ್ಯಕ್ತಿಯುತವಾಗಿವೆ. ಕೆಲಸಕ್ಕೆ ತಕ್ಕ ಸಂಬಳವನ್ನು ಕೊಡುತ್ತೇವೆಂಬ ಕೂಗು ಈ ದಿವಸ ದೇಶದಲ್ಲಿ ಎಲ್ಲೆಯೂ ಕೇಳಿಬರುತ್ತಿಲ್ಲ. ಜೀವನಕ್ಕೆ ತಕ್ಕಷ್ಟು ಸಂಬಳ ಬೇಕು, ಅತನ ಅವಶ್ಯಕತೆಗಳಿಗೆ ಸಾಕಷ್ಟು ಸಂಬಳ ಬೇಕು ಎಂಬ ಕೂಗುಗಳು ಕೇಳಿಬರುತ್ತಿವೆಯೇ ವಿನಾ ಕೆಲಸಕ್ಕೆ ತಕ್ಕಷ್ಟು ಸಂಬಳ ಕೊಡಿ ಎಂಬ ಕೂಗೆಲ್ಲೂ ಇಲ್ಲ. ನಾನು ಇಷ್ಟು ಸಂಪಾದನೆ ಮಾಡುತ್ತಿದ್ದೇನೆ ನನಗೆ ಇಷ್ಟು ಸಂಬಳ ಕೊಡಿ ಎಂದರೆ ಅದರಲ್ಲಿ ಅರ್ಥವಿದೆ.....

Sri M. S. KRISHNAN.—What percentage does the wage Bill bear to the total income of a Factory ? There are certain norms to fix the wages. If it is below some percentage, it would not be all-right.

Sri H. M. CHANNABASAPPA.—I have already stated that I am making a general statement that the wage structure is going high and high, without reference to the work that is being done. ಅಂಕೆ ಅಂಶಗಳ ಆಧಾರವನ್ನಿಟ್ಟುಕೊಂಡು ಮಾತನಾಡತಕ್ಕವನು ನಾನು. ದೇಶದಲ್ಲಿ ಸೋಷಿಯಲಿಸ್ಟಿಕ್ ಸಮಾಜವನ್ನು ಕಟ್ಟತಕ್ಕ ನೀತಿಯೋ ಇದು ! ನೀತಿ ನಿಯಮಗಳನ್ನು ಗಾಳಿಗೆ ತೂರಿ ಫೇರ್‌ವು, ಸ್ಟೈಕ್ ಮಾಡಿ ಹೆದರಿಸಿ ಬೆದರಿಸಿ ಸಂಬಳಗಳನ್ನು ಕೊಡಿ ಎನ್ನುವುದಕ್ಕೆ ಬದಲು, ಕೆಲಸವನ್ನು ಹೆಚ್ಚಿಗೆ ಮಾಡಿ ನಾನಿಷ್ಟು ಹೆಚ್ಚಿಗೆ ಕೆಲಸಮಾಡಿದ್ದೇನೆ ನನಗಿಷ್ಟು ಹೆಚ್ಚಿಗೆ ಕೊಡಿ ಎಂದು ಕೇಳುವುದಕ್ಕೆ ಯಾರೂ ಬೇಡವೆನ್ನುವುದಿಲ್ಲ. ಅದನ್ನು ಬಿಟ್ಟು ಕೆಲಸ ಮಾಡಿದ್ದೇನೆ ಹೆಚ್ಚು ಸಂಬಳ ಕೊಡಿ ಎಂಬ ವಾದದ ಅರ್ಥವೇನು ! ಇದು ನಿಮಗೆಲ್ಲಾ ಬಹಳ ತಮಾಷೆಯಾಗಿದ್ದಂತೆ ಕಾಣುತ್ತಿದೆ. ಕಾಂಗ್ರೇಸ್ಸಿನವರು ಬೇರೆಯವರಲ್ಲ, ನೀವು ಬೇರೆಯವರಲ್ಲ. ಇದು ಬಹಳ ಪ್ರಾಮುಖ್ಯವಾದ ವಿಷಯ. ಕೆಲಸಮಾಡತಕ್ಕವನಿಗೆ ಸಮರ್ಪಕವಾದ ಕೂಲಿ, ಸಂಬಳ ಕೊಡಬೇಕು ಎನ್ನುವುದರಲ್ಲಿ ನಾನೂ ಒಬ್ಬ. ಅವನು ಮಾಡತಕ್ಕ ಕೆಲಸಕ್ಕೆ ಬೃಹದಾಕಾರವಾಗಿ ಸಂಬಳ ಸಾರಿಗೆ ಕೊಡುವುದು ಸರಿಯಲ್ಲ. ಕೆಲಸ ಇರುವುದು ಎಷ್ಟು, ಜನಗಳು ಇರುವುದು ಎಷ್ಟು ಎಂಬುದನ್ನು ನೋಡಬೇಕು. ಎಲ್ಲರಿಗೂ ಸಂಬಳ ಕೂಡಿ ಎಂಬುದಾಗಿ ಹೇಳುವುದರಲ್ಲಿ ಅರ್ಥವಿಲ್ಲ. Wage sill should be pruned in proportion to the production. The days when we could pressurite Government are gone. We cannot use pressure tactics for exploitation.

(SRI H. M. CHANNABASAPPA)

Otherwise the country will go to dogs. ಈಗ ಇದು ಎರಡು ಪಾರ್ಟಿಗಳಿಗೆ ಇರುವ ಸಂಬಂಧ. ವಿದ್ಯುಚ್ಛಕ್ತಿಯನ್ನು ಕೊಂಡು ಅದನ್ನು ಉಪಯೋಗ ಮಾಡಿ ವಿದ್ಯುಚ್ಛಕ್ತಿ ಮುಂಡಲಿಗೆ ಹಣ ಕೊಡುವವರು ನಾವು. ನಮಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವವರು ನೀವು. ಯಾವುದಾದರೂ ಬದಲಾವಣೆಯಾಗಬೇಕಾದರೆ ಉಭಯತ್ರರೂ ಸಾಮರಸ್ಯದಿಂದ ಇದನ್ನು ಮಾಡಬೇಕೇ ವಿನಹ it cannot be one way traffic ದರಗಳನ್ನು ವಿಧಾಯಕ ಮಾಡುವಾಗ್ಗೆ ಸ್ಪೇಚ್ಛೆಯಾಗಿ ಮಾಡುವ ಕಾಲ ಹೋಯಿತು. ಅದು ಈಗ ವಿದ್ಯುಚ್ಛಕ್ತಿ ಮುಂಡಲಿಯವರಿಗೆ ಗೊತ್ತು. ಅನೇಕ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವಾಗ ಒಂದು ನಿರ್ದಿಷ್ಟ ಕಾಲ, ನಿರ್ದಿಷ್ಟ ರೇಟ್‌ನಲ್ಲಿ ಸರಬರಾಯಿ ಮಾಡುತ್ತಾರೆ. ಅದು ಕಾಂಟ್ರಾಕ್ಟ್ ಆಗಿರುತ್ತದೆ. ಆ ಬಗ್ಗೆ ಒಂದು ಪುಲ್‌ಸ್ಟಾಪ್ ಕಾಮ ಬದಲಾವಣೆಮಾಡುವುದಕ್ಕಾಗುವುದಿಲ್ಲ. ರೈತಾಪಿ ಜನಗಳು ವಿದ್ಯುಚ್ಛಕ್ತಿ ಪಡೆದು ವಿದ್ಯುಚ್ಛಕ್ತಿಯಿಂದ ನೀರನ್ನು ಎತ್ತಿ ಉತ್ಪಾದನೆ ಮಾಡುವ ಕಾಲದಲ್ಲಿ ನಮಗೆ ನಿಮಗೆ ಒಪ್ಪಂದವಾಗುತ್ತಿರುವಾಗ ಅದನ್ನು ಏಕಪಕ್ಷೀಯವಾಗಿ ಹೆಚ್ಚುಮಾಡ ಬೇಕೆನ್ನುವುದು ನ್ಯಾಯಸಮ್ಮತವಾಗುವುದಿಲ್ಲ. 24 ರೂಪಾಯಿಗಳಷ್ಟು ಇದ್ದುದನ್ನು 48 ರೂಪಾಯಿಗಳಿಗೆ ಏರಿಸುವಾಗ ಅದನ್ನು ಯಾರೇ ಆಗಲಿ ಒಂದು ಕಾನೂನು ಕಟ್ಟಳೆಯಲ್ಲಿ ಮಾಡ ಬೇಕು. ಅದನ್ನು ಏರುಪೇರು ಮಾಡಿದರೆ ಅದನ್ನು ಬದಲಾವಣೆಮಾಡುವುದಕ್ಕೆ ನಮಗೆ ಒಂದು ಸಂಪೂರ್ಣ ಹಕ್ಕು ಉಂಟು. ಏಕೆಂದರೆ ವಿದ್ಯುಚ್ಛಕ್ತಿ ತೆಗೆದುಕೊಳ್ಳುವಾಗ ರೈತನಾದವನಿಗೆ ಸರಿಯಾಗಿ ಗೊತ್ತಾಗುವುದಿಲ್ಲ. ಅತನು ಅಗ್ರಿಮೆಂಟ್ ಓದಿರುವುದಿಲ್ಲ. ಹೆಬ್ಬೆಟ್ಟು ಒತ್ತಿ ಅದನ್ನು ತೆಗೆದುಕೊಳ್ಳುತ್ತಾನೆ. ಕಾನೂನು ಬದ್ಧವಾಗಿ ಅವನು ಮಾತನಾಡದೇ ಇದ್ದರೂ ಮ್ಯಾರಲ್ ರೈಟ್ ಅವನಿಗೆ ಇದೆ. ನೀವು ದರವನ್ನು ಏಕಪಕ್ಷೀಯವಾಗಿ ಹೆಚ್ಚಿಸಿದಾಗ ನಿಮಗೇನು ತೊಂದರೆಯಾಗುತ್ತದೆಂಬ ಬಗ್ಗೆ ಅವರನ್ನಾಗಲೀ, ಅವರ ಪ್ರತಿನಿಧಿಗಳನ್ನಾಗಲೀ ಕರೆದು ಮಾತನಾಡಿ ಒಂದು ಸಾಮರಸ್ಯದಿಂದ ಚರ್ಚೆ ನಡೆಸಿದ್ದೀರಾ? ಆದ್ದರಿಂದ ಇನ್ನು ಮುಂದೆ ವಿದ್ಯುಚ್ಛಕ್ತಿ ದರವನ್ನು ಸಿಕ್ಕಾಪಟ್ಟೆ ಸ್ಪೇಚ್ಛೆಯಾಗಿ ಹೆಚ್ಚಿಸುವ ನಿಮ್ಮ ನೀತಿ ಸರಿಯಿಲ್ಲ. ನ್ಯಾಯಕ್ಕೆ ವಿರುದ್ಧವಾದುದು ಮತ್ತು ಅದು ಬಹಳ ತಪ್ಪು ಎಂಬುದಾಗಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. The equipment as also labour and supervisory charges, working capital have been mounting year after year. ಇದು ಖಾಸ್ತವ. ಕಾರಣವೇನೇ ಇರಲಿ. ಇದು ಖಾಸ್ತಿ ಆಗುತ್ತಾ ಇದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯ ಇಲ್ಲ. ಇದು ಹೆಚ್ಚು ಆಗುತ್ತಿರುವುದನ್ನು ತಡೆಗಟ್ಟುವ ಕಡೆಗೆ ನಮ್ಮ ಗಮನ ಹರಿಸಬೇಕು. ಕೊಡುವವರು ಇದ್ದಾರೆಂದು ಸುಮ್ಮನೆ ಅವರ ಮೇರೆ ತೆರಿಗೆ ಹೇರುವುದು ಅರ್ಥಶಾಸ್ತ್ರಕ್ಕೆ ನ್ಯಾಯವಾಗುವುದಿಲ್ಲ. ಮೊದಲು ನಿಮ್ಮ ಕೆಲಸ ಎಷ್ಟಿದೆಯೋ ಆ ಕೆಲಸದ ಪ್ರಮಾಣಕ್ಕನುಗುಣವಾಗಿ ನಿಮ್ಮ ಪೇಜ್ ಬರ್ ಜನರು ಇದ್ದಾರೆಯೇ ಎಂಬುದನ್ನು ನೋಡಬೇಕು. ನಾವು ಕೊಡತಕ್ಕ ಸಂಬಳಕ್ಕೆ ಸರಿಯಾಗಿ ಕೆಲಸಮಾಡುತ್ತಾರೆಯೇ ಎಂದು ಯಾರ್ಡ್‌ಸ್ಟಿಕ್ ಇಟ್ಟು ನೋಡಬೇಕು. ಕೆಲಸ ಒಂದಕ್ಕೆರಡರಷ್ಟು ಮಾಡಿದರೆ ಎರಡರಷ್ಟು ಸಂಬಳ ಕೊಡಿ. ಮೂರರಷ್ಟು ಮಾಡಿದರೆ ಮೂರರಷ್ಟು ಕೊಡಿ. ಆಗ ಒಂದು ರೀತಿ ಕೆಲಸಗಾರರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಮಾನ್ಯ ಶ್ರೀ ಗೋಪಾಲಗೌಡರು ಹೇಳಿದ ಹಾಗೆ ಒಬ್ಬರು ಮಾಡುವಂಥ ಕೆಲಸಕ್ಕೆ ಇಬ್ಬರು ಮೂವರು ಮಾಡುವುದು—ಇದು ಸರಿಯಲ್ಲ. ಹೀಗೆ ಮಾಡಿದರೆ ಸಿಬ್ಬಂದಿ ಹೆಚ್ಚಿಸಿಕೊಂಡಷ್ಟು ಸಂಬಳ ಹೆಚ್ಚು ಕೊಡಬೇಕಾಗುತ್ತದೆ. ಇವತ್ತು ಎಲ್ಲವನ್ನೂ ವಿಶದವಾಗಿ ಹೇಳುವುದಕ್ಕಾಗುವುದಿಲ್ಲ. ಬೇರೆ ಅವಕಾಶವನ್ನು ತೆಗೆದುಕೊಂಡು ಹೇಳುತ್ತೇನೆ. ಆದಳಿತದಲ್ಲಿ ಒಬ್ಬನಿಗೆ ಕೆಲಸ ಸಾಲದೇ ಇದ್ದರೂ ಆ ಕೆಲಸಕ್ಕೆ 3-4 ಜನರು ಇದ್ದಾರೆ. ಒಬ್ಬನಿಗೆ ಸಾಕಷ್ಟು ಕೆಲಸವಿಲ್ಲ. ಅಂದಮೇಲೆ ಅದರ ಜೊತೆಗೆ ಗುಂಪು ಕಟ್ಟಿಕೊಂಡು ನಮ್ಮ ಸಂಬಳವನ್ನು ಜಾಸ್ತಿಮಾಡಿ ಎಂದು ಹೇಳುವುದು ಸರಿಯಲ್ಲ. ರೈತರು ಇವತ್ತಿನವರೆಗೂ ಬಹಳ ಶಾಂತಿಯುತವಾಗಿ ನೀವು ಹೇಳಿದಹಾಗೆ ಕೇಳಿಕೊಂಡು ಬಂದಿದ್ದಾರೆ. ನಾನು ಇಡೀ ಭರತಖಂಡದಲ್ಲಿ ರೈತಾಪಿಜನಗಳನ್ನು ಹೋಗಿ ನೋಡಿ ಬಂದು ಇದನ್ನು ಹೇಳುತ್ತಿದ್ದೇನೆ. ಕ್ರಮೇಣ ಅವರೂ ಕೂಡ ಈಗ ಎಚ್ಚರ ಗೊಳ್ಳುತ್ತಿದ್ದಾರೆ. ಇಡೀ ಭರತಖಂಡದಲ್ಲಿ, ಅದರಲ್ಲಿಯೂ ಈ ರಾಜ್ಯದಲ್ಲಿಯೇ ಎಲ್ಲ ರೈತಾಪಿ ಜನಗಳೂ ಸರ್ಕಾರದಮೇಲೆ ದಂಗೆ ಏಳುವ ಮುನ್ನ ನೀವು ಎಚ್ಚರಿಕೆಯಾಗಿರಿ. ಆಹಾರ ಮಂತ್ರಿಗಳಿಗೆ ಒಂದು ಮಾತನ್ನು ಹೇಳಬೇಕಾಗಿದೆ. 40 ರೂಪಾಯಿಗಳಂತೆ ಬತ್ತಕ್ಕೆ ಕೊಡಿ ಎಂದು ಹೇಳಿದರೆ, 48 ರೂಪಾಯಿಗಳು ಎರೆಕ್ಸ್‌ಟ್ರಾಸಿಟಿಗೆ ಹೋಗುತ್ತದೆ. ಆದ್ದರಿಂದ ನಿಮ್ಮ ನೀತಿಯನ್ನು ಸ್ವಲ್ಪ ಬದಲಾವಣೆಮಾಡಿ ಎಂದು ನಾನು ಹೇಳಿದೆ. ಆದರೆ ನೀವು ಏನೂ ಮಾಡಿಲ್ಲ. ತರಾವತಿ ಮತ್ತು ಭದ್ರಾ ಯೋಜನೆಗಳು ಇವತ್ತಿನದಿವಸ ಎರೆಕ್ಸ್‌ಟ್ರಾಸಿಟಿ ಬೋರ್ಡಿನ ವಶದಲ್ಲಿದ್ದರೂ ಅದರ ಉತ್ಪತ್ತಿ

ಯನ್ನು ಸರ್ಕಾರದವರೇ ತೆಗೆದುಕೊಂಡಿದ್ದಾರೆ. ಉತ್ಪಾದನೆ ಪೂರ್ತಿಯಾಗಿ ನಿಮ್ಮ ಕೈಯಲ್ಲಿ ಇರಬಹುದು, ಹೊಸ ಉದ್ಯಮಗಳನ್ನು ಜಾರಿಗೆ ತರುವುದು ನಿಮ್ಮ ಕೈಯಲ್ಲಿ ಇರಬಹುದು, ವಿದ್ಯುಚ್ಛಕ್ತಿ ಮಂಡಲಗೆ ನಿರ್ದಿಷ್ಟ ರೇಟಿಗೆ ಅವರು ಆ ಪಾಯಿಂಟ್‌ನಲ್ಲಿ ಮಾರಾಟಮಾಡಿ ಅದರಲ್ಲಿ ಏನು ಉತ್ಪತ್ತಿ ಬರುತ್ತದೆಯೋ ಅದು ಜನರಲ್ ರೆವಿನ್ಯೂಗೆ ಬರುತ್ತದೆ. ಏಕೆಂದರೆ ಅವರು ಸಾಲಸೋಲವಾಡಿ ಕಟ್ಟಿದ್ದಾರೆ. ಆದರಿಂದ ಉತ್ಪಾದನೆ ಹೆಚ್ಚಿಗೆ ಬರಬೇಕು. ಮತ್ತೆ ಆಹಾರ ನೀತಿ, ವ್ಯವಸಾಯ ನೀತಿ ನಿಮ್ಮ ಕೈಯಲ್ಲಿ ಇರಬೇಕು. ಅದು ಎಲೆಕ್ಟ್ರಿಸಿಟಿ ಬೋರ್ಡಿಗೆ ಇರಬಾರದು. ಅವರು ವ್ಯಾಪಾರಮಾಡಿ ಕೊಡಿ ಎಂದು ಹೇಳಿದರೆ ಅದು ಆಗುವುದಿಲ್ಲ. ನುಂಕದವನ ಹತ್ತಿರ ನುಖುದುಃಖ ಹೇಳಿದ ಹಾಗಾಗುತ್ತದೆ. ಅವರನ್ನು ವ್ಯಾಪಾರ ದೃಷ್ಟಿಯಿಂದ ಕೆಲಸಮಾಡಿ ಎಂಬುದಾಗಿ ಹೇಳಿದರೆ ಆಗುವುದೇ ಇಲ್ಲ. ಅಂದಮೇಲೆ ವ್ಯವಸಾಯಗಾರರಿಗೂ ದರವನ್ನು ಕಡಿಮೆಮಾಡಿ ಕೊಡಿ ಎಂದು ಹೇಳಿದರೆ ಅವರು ಹೇಗೆ ಲಾಭವಿಲ್ಲದೆ ಕೆಲಸಮಾಡುವುದಕ್ಕಾಗುತ್ತದೆ? ಅದು ಆಗುವುದಿಲ್ಲ.

6-3^ P.M.

ಇದಕ್ಕೆ ನಿರ್ದಿಷ್ಟವಾದಂತಹ ನೀತಿಯನ್ನು ನೀವು ರೂಪಿಸಬೇಕು. ಭೂಗರ್ಭದಲ್ಲಿರಶಕ್ಕ ಜಲದ ಪ್ರತಿಯೊಂದು ತೊಟ್ಟನ್ನೂ ಮೇಲಕ್ಕೆ ತೆಗೆದು ದೇಶಕ್ಕೆ ಉತ್ಪತ್ತಿ ಮಾಡತಕ್ಕ ರೀತಿಯಲ್ಲಿ ಉಪಯೋಗಿಸಬೇಕು. ಅದಕ್ಕೆ ಎಷ್ಟು ಖರ್ಚಾಗುತ್ತದೆ ಅದನ್ನು ಸರ್ಕಾರದ ಬೊಕ್ಕಸದಿಂದ ಕೊಡಬೇಕು. ದೊಡ್ಡ ದೊಡ್ಡ ಯೋಜನೆಗಳನ್ನು ನಿರ್ಮಾಣ ಮಾಡುವಾಗ ನಾವು ಕೇಂದ್ರ ಸರ್ಕಾರದ ಹಣದಿಂದ ಅದನ್ನು ಕಟ್ಟಿ, ಅದರಿಂದ ಬರತಕ್ಕ ನೀರನ್ನು ಮಾರಾಟ ಮಾಡಿ. ಹಾಗೆ ಇದು ಒಂದು ಉದ್ಯಮವೆಂದು ಭಾವನೆ ಮಾಡಬೇಕು. ಮತ್ತು ಎಲ್ಲೆಲ್ಲಿ ಹೊಳೆ ಇದೆ, ಅದರ ನೀರನ್ನು ಉಪಯೋಗ ಮಾಡಬೇಕು. ಒಬ್ಬ ಹಳ್ಳಿಯ ರೈತನು, ಹೊಳೆಯ-ದಡದಲ್ಲಿ ವಿದ್ಯುಚ್ಛಕ್ತಿ ಕೊಡಿ ಎಂದು ಕೇಳಿದರೆ, ಅವನಿಗೆ ನೀವು ಕೊಡುತ್ತಾ ಇಲ್ಲ. ಎಲ್ಲೆಲ್ಲ ಹೊಳೆಗಳು ಇವೆಯೋ, ಎಲ್ಲ ಸಣ್ಣ ಕಾಲುವೆಗಳು ಹೋಗುತ್ತವೋ ಅಲ್ಲೆಲ್ಲಾ ನಮ್ಮ ಎಲೆಕ್ಟ್ರಿಸಿಟಿ ಲೈನು ಹೋಗಬೇಕು. ಅಲ್ಲಿ ದುಡ್ಡು ಬರಲಿ, ಬರದಿರಲಿ, ಲೈನು ಹಾಕಬೇಕು. ಇವತ್ತು ಕಾವೇರಿ, ಕೃಷ್ಣಾ, ಘಟಪ್ರಭಾ ಮತ್ತು ಅದರ ಅಕ್ಕಪಕ್ಕದಲ್ಲಿ ವಿದ್ಯುಚ್ಛಕ್ತಿ ಲೈನು ಹೋದರೆ ರೈತನು ವಿದ್ಯುಚ್ಛಕ್ತಿ ತೆಗೆದುಕೊಳ್ಳುತ್ತಾನೆ. ಈಗ ಹುಚ್ಚು ಬಿಡದೆ ಮದುವೆಯಾಗುವುದಿಲ್ಲ, ಮದುವೆಯಾಗದೆ ಹುಚ್ಚು ಬಿಡುವುದಿಲ್ಲವೆಂಬ ಗಾದೆಯಂತೆ ಆಗಿದೆ. ಎಲೆಕ್ಟ್ರಿಸಿಟಿ ಬೋರ್ಡಿಗೆ ಲಾಭವಾಗದೆ ಹೋದರೆ, ಹೊಳೆಯ ಪಕ್ಕದಲ್ಲಿ ಲೈನು ಎಳೆಯುವ ಹಾಗೆ ಇಲ್ಲ. ಈ ಒಂದು ಪರಿಸ್ಥಿತಿಗೆ ತಂದೊಡ್ಡಿ ರೈತಾಪಿ ಜನರು ಉತ್ಪಾದನೆಯಿಂದ ಬೆಳೆಯಬೇಕೆಂದು ಹೇಳಿದರೆ ಹೇಗೆ ಸಾಧ್ಯ? ಅದು ಸರ್ಕಾರದ ನೀತಿಯಿಂದ ನೇರವಾಗಿ ನಡೆಯಬೇಕು. ಅದರ ಉತ್ಪನ್ನ 10-15 ವರ್ಷಗಳಲ್ಲಿ ಬರಬಹುದು ಯಾವ ರೀತಿ ಕೃಷ್ಣರಾಜಸಾಗರ ಕಟ್ಟುವಾಗ, ಆಗ ಉತ್ಪತ್ತಿ ಏನೂ ಬರುತ್ತಾ ಇರಲಿಲ್ಲ. ಈಗ ನೋಡಿ, ಅಲ್ಲಿ ಎಲ್ಲಾ ಲಕ್ಷ್ಮಿ ತಾಂಡವಾಡುತ್ತಿದೆ. ಇವತ್ತಿನದಿವನ ಬಿತ್ತಿದ ಬೀಜದ ಉತ್ಪತ್ತಿ ಬರಬೇಕಾದರೆ, ಹತ್ತಾರು ವರ್ಷ ಆಗಬೇಕು. ಇದಕ್ಕೆಲ್ಲಾ ಎಲ್ಲಿಂದ ದುಡ್ಡು ತರಬೇಕೆಂದು ನೀವು ಯೋಚನೆ ಮಾಡುತ್ತಿದ್ದೀರಿ. ಇವತ್ತು ಕಾಳಸಂತೆಯ ಹಣ ಎಷ್ಟು ಇದೆ? ಇವತ್ತು ರೈತನು ಅವನ ಗುಡಿಸಲು ರಿಪೇರಿ ಮಾಡುವುದಕ್ಕೆ ಅವನಲ್ಲಿ ಹಣವಿಲ್ಲ. ಆದರೆ ಪಟ್ಟಣಗಳಲ್ಲ ಸೌಧಗಳಮೇಲೆ ಸೌಧಗಳಾಗುತ್ತಿವೆ. ಇವತ್ತು ಅಂತವರ ಜೋಬಿಗೆ ಕೈ ಹಾಕುವುದಕ್ಕೆ ನಿಮಗೆ ನಮಗೆ ಧೈರ್ಯವಿಲ್ಲ. ಮುಂಬಾಯಿ, ಕಲ್ಕತ್ತಾದ ಕಡೆ ಹೋಗಿ ನೋಡಿ, ಸೌಧಗಳಮೇಲೆ ಸೌಧಗಳಾಗುತ್ತಿವೆ.

ಆದ್ದರಿಂದ ಹೊಳೆಯ ಪಕ್ಕಗಳಲ್ಲಿ ಇಂಥ ಎಲೆಕ್ಟ್ರಿಸಿಟಿ ಲೈನುಗಳನ್ನು ಎಳೆಯಬೇಕು. ಇವೆಲ್ಲಾ ಪಾರ್ಟ್ ಅಂಡ್ ಪಾರ್ಸೆಲ್ ಆಫ್ ದಿ ಡೆವಲಪ್‌ಮೆಂಟ್ ಪ್ರೋಗ್ರಾಂ ಆಗಬೇಕು. It is part and parcel of the Agriculture Department; it is not a programme of the M.S.E.B. which is a business concern and a Marwadi. ಅದು ಮಾರ್ವಾಡಿ ಇದ್ದಹಾಗೆ ಇರಬಾರದು. ಡೆವಲಪ್‌ಮೆಂಟ್ ಪ್ರೋಗ್ರಾಂ ಆಗಬೇಕಾದರೆ, ವ್ಯವಸಾಯ ಅಭಿವೃದ್ಧಿ ಆಗಬೇಕಾದರೆ, ಅದು ವ್ಯವಸಾಯದ ಒಂದು ಅಂಗವಾಗಿ ಕೆಲಸ ಮಾಡಬೇಕು. ಅದನ್ನು ನಾವು ಯೋಚನೆ ಮಾಡಬೇಕು. I will be very happy to discuss this with as many people as possible as to how exactly the whole thing could be given a shape. ಈ ವಿದ್ಯುಚ್ಛಕ್ತಿಯನ್ನು ಹೊರ ರಾಜ್ಯಗಳಿಗೆ ಮಾರಾಟಮಾಡುತ್ತಿದ್ದಾರೆ. ಇದು ಮನೆಗೆ ಮಾರಿ ಪರದೇಗೆ ಉಪಕಾರಿ ಎಂಬ ಗಾದೆಯ ಹಾಗೆ ಆಯಿತು. ಶರಾವತಿ ವಿದ್ಯುಚ್ಛಕ್ತಿ ಆಗುವಾಗ ಹೇಳುತ್ತಿದ್ದೀರಿ, ವಿದ್ಯುಚ್ಛಕ್ತಿ ಪೂರ್ತಿಯಾಗಿ ಆಗಲಿ, ನೀವು ಕೇಳಿದಷ್ಟು ಕೊಡುತ್ತೇವೆಂದು ಜನರು

(SRI H. M. CHANNABASAPPA)

ಕಾದರು, ಬೆಳಿಗ್ಗೆ, ನಂಜೆ, ಎರ್ನಾ ಕಾದು, ಇವತ್ತು ಬರುತ್ತದೆ, ನಾಳೆ ಬರುತ್ತದೆ, ಬಂತು, ಬಂತು ಎಂದು ಎಲ್ಲರೂ ಕಾದು ಕೂತರು. ಆದರೆ ಶರಾವತಿ ಬಂದಮೇಲೆ ಬೇಕಾದಷ್ಟು ವಿದ್ಯುಚ್ಛಕ್ತಿ ಬಂತು. ಇದನ್ನು ಪೂರಾಟ ಮಾಡಬೇಕಾದರೆ, ಬೇರೆ ರಾಜ್ಯಗಳಿಗೆ ಹೆಚ್ಚು ಕೊಡಲು ವ್ಯಾರಂಭ ಮಾಡಿದಿರಿ. ಇವತ್ತು ಏನು ಮಾಡುತ್ತಿದ್ದೀರೆಂದರೆ, ಒಂದು ಗ್ರಿಡ್ ಎಂದು ಮಾಡಿದ್ದೀರಿ. ಗ್ರಿಡ್ ಮಾಡಿದಂತಹ ಉದ್ದೇಶ ಬೇರೆ. ಈಗ ಆಗಿರುವಕ್ಕಿಂತದ್ದು ಬೇರೆ. ನಮ್ಮ ವಿದ್ಯುಚ್ಛಕ್ತಿಯನ್ನು ಅವರಿಗೆ ತೆಗೆದುಕೂಂಡು ಹೋಗಲು ನಾವು ಅಲ್ಲಿಯವರೆಗೆ ರೈಲನು ಹಾಕಿಕೊಡಬೇಕು. ನಾವು ಒಂದು ಥೋರಣಿಯನ್ನು ಇಟ್ಟುಕೊಂಡಿರಬೇಕು. ಒಂದು ಗುರಿಯನ್ನು ಇಟ್ಟುಕೊಂಡಿರಬೇಕು ಇವತ್ತು ನಾವು ವಿದ್ಯುಚ್ಛಕ್ತಿಯನ್ನು ಯಾವ ದರದಲ್ಲಿ ಕೊಡುತ್ತಿದ್ದೇವೆ? ನಮಗೆ 10 ಪೈಸೆಯಲ್ಲಿ ಕೊಡುತಿದ್ದಾರೆ. ಟ್ಯಾಕ್ಸ್ ಸೇರಿ 11 ಪೈಸೆ. ಮೊದಲು 5 ಪೈಸೆ ಇತ್ತು. ಮದ್ರಾಸಿನಲ್ಲಿ 8 ಪೈಸೆ. ಪಕ್ಕದ ಕೇರಳದಲ್ಲಿ 8 ಕಾಲು ಪೈಸೆ. ಇದು ಯಾವ ನೀತಿ? ರೈತರು ತಾನಾಗಿ ಏಳ ಬೇಕೋ ಏನು? ಅವರಿಗೆ ಎಲ್ಲರೂ ಒಗ್ಗಟ್ಟಾಗತಕ್ಕ ಶಕ್ತಿ ಇದ್ದರೆ ನಮ್ಮನ್ನು ನಿಮ್ಮನ್ನು ಹವ ಮಾಡುತ್ತಿದ್ದರು. ಪಾಪ ಅವರಿಗೆ ಊರಿಂದ ಬೆಂಗಳೂರಿಗೆ ಬರಲು ಬಸ್ಸಿಗೆ ಸಹ ದುಡ್ಡಿಲ್ಲ. ಹೀಗಾದರೆ ಅವರು ಒಂದು ಸತ್ಯಾಗ್ರಹ ಮಾಡುವುದಾದರೂ ಹೇಗೆ! ಹಿಂದೆ ನಾನು ಹುಡುಗ ನಾಗಿದ್ದಾಗ, ವಿಶ್ವೇಶ್ವರಯ್ಯ ಕೆನಾಲ್‌ನ ಒಂದು ಬ್ಲಾಕ್ ಸಿಸ್ಟಂ ಬಗ್ಗೆ, ಪುಟ್ಟಣ್ಣ ಎಂಬ ಸ್ಕೂರ್ ಮಾಸ್ಟರ್ ಅವರ ಜೊತೆಗೆ, 5 ಸಾವಿರ ಜನರು ಕಾಲ್ನಡಿಗೆಯಿಲ್ಲೇ ಮಂಡ್ಯದಿಂದ ಇಲ್ಲಿಗೆ ಅವೆನ್ಯೂ ರೋಡಿಗೆ ಬಂದಿದ್ದರು. ಆಗ ಇಲ್ಲಿ ಸರ್ ಮಿರ್ಜಾ ಸಾಹೇಬರು ಗಡಗಡ ನಡುಗಿಹೋದರು. ಈಗ ಜನ ಎಚ್ಚೆತ್ತು, ಸರ್ಕಾರ ಏನು ಮಾಡುತ್ತಿದ್ದಾರೆ ಎಂದು ಬಹಳ ಕಾತರತೆಯಿಂದ ನೋಡುತ್ತಿದ್ದಾರೆ. ಅದಕ್ಕಾಗಿ ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ತಾವುಗಳೆಲ್ಲರೂ ಬುದ್ಧಿವಂತರು ಮತ್ತು ಯುವಕರು ಉತ್ಸಾಹದಿಂದ ಕೆಲಸಮಾಡತಕ್ಕ ಶಕ್ತಿ ನಿಮಗೆ ಇದೆ. I have got suggestions to give but the time at my disposal is short and I am afraid I cannot do justice. What I request is, please be realistic in your attempts. Please know for certain that the farmers are the people who are even today responsible for the development of the country. They are the people who are contributing more than 56 per cent for the national wealth in the country. They are the people who are supplying 56 per cent of the raw material required for the ordinary industries. Industries may stop but if farming operation stops, I am afraid that will result in great loss to the country. Therefore, tomorrow alone please sit, discuss and take a decision to go back to original rates. As to wherefrom to get funds, it is your business. ಅಧಿಕಾರಾರೂಢರಾಗಿರತಕ್ಕ ತಾವು ಎಲ್ಲರೂ ಸೇರಿ ಈ ಕೆಲಸವನ್ನು ಮಾಡಬೇಕು. ವಿದ್ಯುಚ್ಛಕ್ತಿ, ಪಂಪುಸೆಟ್ಟುಗಳು, ಬಾವಿ ಈ ಮೂರು ವಿಷಯುಗಳಿಗೂ ಸಂಬಂಧಪಟ್ಟ ಹಾಗೆ ಒಂದು ಪ್ಯಾಕೇಜ್ ಪ್ರೋಗ್ರಾಮ್ ಹಾಕಿ ಕೊಂಡು ಇದರ ಸೌಲಭ್ಯಗಳನ್ನು ಜನತೆಗೆ ಒದಗಿಸತಕ್ಕ ಕೆಲಸವನ್ನು ಸರ್ಕಾರದವರು ನಿರ್ವಹಿಸ ಬೇಕು. ದೇಶದಲ್ಲಿ ಉತ್ಪಾದನೆ ಮಾಡತಕ್ಕ ಕೆಲಸಗಳನ್ನು ಸರ್ಕಾರದವರೇ ಮಾಡಬೇಕು. ಗ್ರೀನ್ ರೆವಲ್ಯೂಷನ್ ಎನ್ನುವ ಪುಸ್ತಕವನ್ನು ಸರ್ಕಾರದವರು ಪ್ರಿಂಟ್ ಮಾಡಿದ್ದಾರೆ. ಆದರಲ್ಲಿ ಮಂತ್ರಿಗಳೆಲ್ಲರೂ ನಿಂತುಕೊಂಡು ಫೋಟೋ ತೆಗೆಸಿಕೊಂಡಿದ್ದಾರೆ. This is not green revolution; it will only lead to blood revolution. Real green revolution must take place. ಆದ್ದರಿಂದ ನಾನು ತಮ್ಮಲ್ಲಿ ಅರಿಕೆ ವಿಡಿಕೊಳ್ಳುತಕ್ಕದ್ದು ಇಷ್ಟೆ. ವಿದ್ಯುಚ್ಛಕ್ತಿ ಮಂತ್ರಿಯವರು ವ್ಯವಸಾಯ ಉದ್ಯಮಕ್ಕೆ ವಿದ್ಯುಚ್ಛಕ್ತಿಯನ್ನು ನರಬಾರಾಜು ಮಾಡ ತಕ್ಕ ವಿಷಯದಲ್ಲಿ ಬೇರೆ ಒಂದು ನೀತಿಯನ್ನು ಅನುಸರಿಸಬೇಕು. ಮತ್ತು ಆಹಾರ ಉತ್ಪಾದನೆಗೆ ಸಂಬಂಧಪಟ್ಟ ಹಾಗೆ ವಿದ್ಯುಚ್ಛಕ್ತಿ ಇಲಾಖೆಯವರು ಮತ್ತು ವ್ಯವಸಾಯ ಇಲಾಖೆಯವರು ಇಬ್ಬರೂ ಸೇರಿ ವಿದ್ಯುಚ್ಛಕ್ತಿಯನ್ನು ಯಾವರೀತಿ ಉಪಯೋಗ ಮಾಡಬೇಕು ಎನ್ನುವುದರ ಬಗೆ ಒಂದು ನೀತಿಯನ್ನು ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ಇನ್ನು ಹೇಳತಕ್ಕದ್ದಾದ್ದು ಅನೇಕ ವಿಷಯಗಳಿವೆ; ಆದರೆ ಈಗ ಕಾಲಾವಕಾಶ ಇಲ್ಲ. ಬೇರೆ ಅವಕಾಶವನ್ನು ತೆಗೆದುಕೊಂಡು ನಾನು ಮಾತನಾಡುತ್ತೇನೆ. ಈಗ ಪಂಪುಸೆಟ್ಟುಗಳಿಗೆ ಒದಗಿಸ ತಕ್ಕ ವಿದ್ಯುಚ್ಛಕ್ತಿಗೆ 48 ರೂಪಾಯಿಗಳನ್ನೇನು ವಿಧಿಸುವುದಕ್ಕೆ ಹೊರಟಿದ್ದಾರೆ ಇದು ಸರಿಯಲ್ಲ.

ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನು ಸುಲಭದರದಲ್ಲಿ ಕೊಟ್ಟು ಹೆಚ್ಚು ಆಹಾರೋತ್ಪಾದನೆಯನ್ನು ಮಾಡುವ ದೃಷ್ಟಿಯಿಂದ ಕೆಲಸಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಮಾನ್ಯ ಸಭಾಧ್ಯಕ್ಷರೇ, ಇವೊತ್ತಿನದಿವಸ ಮೈಸೂರು ರಾಜ್ಯದಲ್ಲಿರತಕ್ಕ ವಿದ್ಯುಚ್ಛಕ್ತಿ ಮಂಡಲಿಯವರು ಇತ್ತೀಚೆಗೆ ವಿದ್ಯುಚ್ಛಕ್ತಿ ದರವನ್ನು ಏರಿಸುತ್ತಿರುವ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇವೊತ್ತಿನದಿವಸ ವಿದ್ಯುಚ್ಛಕ್ತಿ ಮಂಡಲಿಯವರು ದೇಶಾದ್ಯಂತ ಒಂದು ಏಕರೂಪವಾದ ವಿದ್ಯುಚ್ಛಕ್ತಿ ದರವನ್ನು ಹೆಚ್ಚಿಸಿರತಕ್ಕ ಬಗ್ಗೆ, ಅದರಲ್ಲೂ ಪಂಪುಸೆಟ್ಟುಗಳ ಬಗ್ಗೆ ಒಂದು ಅಶ್ವಶಕ್ತಿಗೆ ಎರಡು ರೂಪಾಯಿಗಳಿಂದ ನಾಲ್ಕುರೂಪಾಯಿಗಳಿಗೆ ಏರಿಸಿರುವ ವಿಚಾರದಲ್ಲಿ ವಿರೋಧ ಇರತಕ್ಕ ವಿಷಯದಲ್ಲಿ ಈ ಸಭೆಯ ಮಾನ್ಯ ಸದಸ್ಯರು ಬಹಳ ತೀವ್ರವಾಗಿ ವಿರೋಧಿಸಿದ್ದಾರೆ. ಆದ್ದರಿಂದ ಈ ಒಂದು ದರವನ್ನು ಏರಿಸಿರತಕ್ಕ ಬಗ್ಗೆ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸುವವರಲ್ಲಿ ನಾನೂ ಒಬ್ಬ. ಇವೊತ್ತಿನ ದಿವಸ ವಿರೋಧಪಕ್ಷ ಹಾಗೂ ಕಾಂಗ್ರೆಸ್‌ಪಕ್ಷ ಎರಡು ಕಡೆಗಳಲ್ಲೂ ಇದರ ಬಗ್ಗೆ ಒಂದೇ ಅಭಿಪ್ರಾಯ ಇದೆ. ಎಲ್ಲರೂ ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲರಲ್ಲೂ ಈ ಬಗ್ಗೆ ಒಂದೇ ಅಭಿಪ್ರಾಯ ಇದೆ ಎಂದು ನಾನು ಈ ಸಭೆಯಮೂಲಕ ವಿದ್ಯುಚ್ಛಕ್ತಿ ಮಂಡಲಿಗೆ ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ವಿದ್ಯುಚ್ಛಕ್ತಿ ಮಂಡಲಿಯವರು ಕೆಲಸಮಾಡಿರತಕ್ಕದ್ದನ್ನು ನೋಡಿದರೆ ಶ್ರೀಮಾನ್ ಚನ್ನಬಸಪ್ಪನವರು ಹೇಳಿದಹಾಗೆ ಇದು ಮಾರ್ವಾಡಿ ಬೋರ್ಡ್ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ದೇಶದಲ್ಲಿ ಸರ್ಕಾರದ ಪತಿಯಲ್ಲಿ ಎರೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಇದ್ದ ಕಾಲದಲ್ಲಿ ಆಗುತ್ತಿದ್ದಂತಹ ಕೆಲಸ ಮತ್ತು ಸೌಲಭ್ಯಗಳು ಇವೊತ್ತಿನದಿವಸ ಬೋರ್ಡಿನಿಂದ ನಮಗೆ ದೊರೆಯುತ್ತಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವೊತ್ತಿನದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಜನತೆ ಮನೆಗಳಿಗೆ ಮತ್ತು ಪಂಪುಸೆಟ್ಟುಗಳಿಗೆ ಉಗಯೋಗಿಸತಕ್ಕಂಥ ವಿದ್ಯುಚ್ಛಕ್ತಿಗೆ ವಿದ್ಯುಚ್ಛಕ್ತಿ ಮಂಡಲಿಯವರು ಹೆಚ್ಚಿನ ದರವನ್ನು ಏರಿಸಿರುವುದರಿಂದ ಗ್ರಾಮಾಂತರ ಪ್ರದೇಶದ ಜನಗಳ ಕಷ್ಟವನ್ನು ಇಷ್ಟೆಂದು ಹೇಳತೀರದು. ಸಾಮಾನ್ಯವಾಗಿ ರೈತರಾದಂಥವರಿಗೆ ನರಿಯಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸುವುದಕ್ಕೆ ಬರುವದಿಲ್ಲ. ಒಂದೊಂದು ಸಾರಿ ರೋಡ್ ಜಾಸ್ತಿಯಾಗಿ ಮೋಟಾರ್ ಸುಟ್ಟುಹೋಗುತ್ತದೆ. ಮತ್ತೆ ಕೆಲವು ಸಾರಿ ಪ್ಯೂಜ್ ಹೋಗಬಡುತ್ತದೆ. ಆಲ್ಯೂಮಿನಿಯಮ್ ವೈರ್ ಹಾಕಿರುತ್ತಾರೆ. ಅದು ಜಾಗ್ರತೆ ಸುಟ್ಟು ಹೋಗುತ್ತದೆ. ಗಾಳಿಗೆ ಅರ್ಥಾಡುವಂತಹ ವೈರಿನ್ನು ಹಾಕಿರುತ್ತಾರೆ. ಪ್ಯೂಜ್ ಹೋಗಿದೆ ಬಂದು ಹಾಕಿ ಎಂದು ಸಂಬಂಧಪಟ್ಟ ಆಫೀಸಿಗೆ ತಿಳಿಸಿದರೆ ಅವರು ಬಂದು ರಿಪೇರಿ ಮಾಡಬೇಕಾದರೆ ಎರಡು ದಿವಸಗಳಾಗುತ್ತದೆ. ನಾನು ಸಹ 3 ಪಂಪ್‌ಸೆಟ್ಟುಗಳನ್ನು ಇಟ್ಟುಕೊಂಡಿದ್ದೇನೆ. ಅವುಗಳು ಕೆಟ್ಟರೆ ನಾವು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಸಂಬಂಧಪಟ್ಟ ನೌಕರರೇ ಬಂದು ರಿಪೇರಿ ಮಾಡಬೇಕಾಗುತ್ತದೆ. ಈಗ ಉಪಯೋಗಿಸುವ ಸಾಮಾನುಗಳು ಬಹಳ ಕೆಳದರ್ಜೆಯವುಗಳಾಗಿವೆ ಎಂದು ಹೇಳಬಹುದು. ನಾನು ನನ್ನ ಚಿಕ್ಕವಯಸ್ಸಿನಿಂದಲೂ ಕೂಡ ಈ ವಿದ್ಯುಚ್ಛಕ್ತಿ ಮಂಡಲಿಯವರು ಉಪಯೋಗಿಸುವ ಮೆಟೀರಿಯಲ್ಸ್‌ನ್ನು ನೋಡುತ್ತಿದ್ದೇನೆ. ಮೊದಲು ಉಪಯೋಗಿಸುತ್ತಿದ್ದ ಸಾಮಾನುಗಳಿಗಿಂತ ಈಗಿನ ಸಾಮಾನುಗಳು ಬಹಳ ಕೆಳದರ್ಜೆಯವುಗಳಾಗಿವೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ ಈಗಿನ ಟ್ರಾನ್ಸ್‌ಫಾರ್ಮರ್‌ಗಳು ನರಿಯಾಗಿ ಕೆಲಸವನ್ನೇ ಮಾಡುತ್ತಿಲ್ಲ. ಆಗಾಗ್ಗೆ ಕೆಟ್ಟು ಹೋಗುತ್ತಿರುತ್ತವೆ. ಮತ್ತು ಬೆಲೆಗಳು ಸಹ ಜಾಸ್ತಿಯಾಗಿವೆ. ಚೇರ್‌ಮನ್ ಅವರನ್ನು ಕೇಳಿದರೆ, ಏನು ಮಾಡುವುದು, ತಾವುಗಳು ಸಹಕರಿಸಬೇಕು ಎಂದು ಹೇಳುತ್ತಾರೆ. ಈ ಒಂದು ವಿದ್ಯುಚ್ಛಕ್ತಿ ಮಂಡಲಿಯ ಕೆಲಸವನ್ನು ಮತ್ತು ಆಗುತ್ತಿರುವ ಅನ್ಯಾಯಗಳನ್ನು ಹೇಳಿದ್ದಿದ್ದರೆ ನನ್ನ ಅತ್ಮಕ್ಕೆ ತೃಪ್ತಿಯಾಗುವುದಿಲ್ಲ. ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡುವಂತೆ ಈ ಬೋರ್ಡನ್ನು ಸಹ ಸೂಪರ್‌ಸೀಡ್ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಈಗ ಅಲ್ಲಿ ಅಷ್ಟೊಂದು ಹಣ ಪೋಲಾಗುತ್ತದೆ. ಅಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಹೇಳಿದರೆ 3-4 ದಿವಸಗಳವರೆಗೂ ಕೂಡ ಹೇಳಬಹುದು. ಅಷ್ಟೊಂದು ಅನ್ಯಾಯ ನಡೆಯುತ್ತಿದೆ. ಒಂದು ಪೋಲನ್ನು ನಡಲು 20-30 ಜನ ಹೋಗುತ್ತಾರೆ. ಬೆಳಿಗ್ಗೆ ಹತ್ತೂವರೆ ಗಂಟೆಗೆ ಪೋಲನ್ನು ನೆಡಲು ಹೊರಟು ನೆಡುವ ಸ್ಥಳಕ್ಕೆ 12 ಗಂಟೆಯಹೊತ್ತಿಗೆ ಸೇರುತ್ತಾರೆ. ಮತ್ತೆ ಮೂರು ಗಂಟೆಗೆ ವಾಪಸ್ ಬಂದುಬಿಡುತ್ತಾರೆ. ಆಲ್ಲಿಗೆ ಅವರ ಆ ದಿನದ ಕೆಲಸ ಮುಗಿಯಿತು. ಒಂದು ಕಂಬ ನಡೆಲು 3-4ಜನ ಆದರೆ ಸಾಕು. ಅದರ ಬದಲು 20-30 ಜನರು ಒಂದು ಕಂಬವನ್ನು ಗಾಡಿಯಲ್ಲಿ ಹಾಕಿಕೊಂಡು ತಮ್ಮದೇ ಆದ ಘೋಷಣೆಗಳನ್ನು ಕೂಗುತ್ತಾ ಸ್ಮಶಾನ ಯಾತ್ರೆಯಲ್ಲಿ ಜನರು ಹೋಗುವಂತೆ ಹೋಗುತ್ತಿರುತ್ತಾರೆ. ಇವತ್ತು ಯಾರಾದರೂ ರೈತರಿಗೆ ಇರಿಗೇಷನ್ ಪಂಪ್‌ಸೆಟ್ಟು ಮಂಜೂರು ಆದರೆ, ಲೈನ್ ಎಳೆಯುವುದಕ್ಕೆ ಬೇಕಾದ ಕಂಬವನ್ನು ತೆಗೆದುಕೊಂಡು ಹೋಗಲು ಸಂಬಂಧಪಟ್ಟ ರೈತರೇ ಗಾಡಿಯನ್ನು ತೆಗೆದು

(ಶ್ರೀ ಎನ್. ಚಿಕ್ಕೇಗೌಡ)

ಕೊಂಡು ಹೋಗಬೇಕು. ಲೈನ್ ಎಳೆಯುವುದಕ್ಕೆ ಬಂದ ಲೈನ್‌ಮನ್‌ಗಳಿಗೆ ನಮ್ಮ ಹಳ್ಳಿಗಳಲ್ಲಿ ಊಟ ಹಾಕುವ ಪದ್ಧತಿ ಬೇರೆ ಇದೆ. ಈಗ ಬೋರ್ಡಿನಲ್ಲಿ 25 ಸಾವಿರ ಜನರು ಕೆಲಸದಲ್ಲಿ ಇದ್ದಾರೆಂದು ಕೇಳಿದ್ದೇನೆ. ಮತ್ತೆ ಕೆಲವರು 35 ಸಾವಿರ ಜನರು ಇದ್ದಾರೆಂದು ಹೇಳುತ್ತಾರೆ. ಇವತ್ತು ಚೇರ್‌ಮನ್ ಅವರು ಕೊಡುವ ಅಂಕಿ ಅಂಶಗಳಲ್ಲಿ ಮತ್ತು ಚೀಫ್-ಇಂಜಿನಿಯರ್ ಅವರು ಕೊಡುವ ಅಂಕಿಅಂಶಗಳಲ್ಲಿ ವ್ಯತ್ಯಾಸಗಳು ಇವೆ. ಅಲ್ಲಿಯ ಆಡಳಿತ ಯಾವ ರೀತಿ ಇದೆ ಎಂದರೆ ಎಲ್ಲವೂ ಲಂಚ ಮಯವಾಗಿದೆ. ಒಂದು ಪಂಪ್‌ಸೆಟ್ಟು ಡೋಕಿಸಿಕೊಳ್ಳಬೇಕಾದರೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಲಂಚ ಕೊಡಬೇಕು. ಈ ಲಂಚ ಕೊಡುವುದು ಸೂಪರ್‌ವೈಸರಿಂದ ಪ್ರಾರಂಭವಾಗುತ್ತದೆ. ಮೊದಮೊದಲು ಪ್ರೈಯಾರಿಟಿ ಲಿಸ್ಟ್ ಪ್ರಕಾರ ಪಂಪ್‌ಸೆಟ್ಟುಗಳನ್ನು ಮಂಜೂರು ಮಾಡುತ್ತೇವೆ ಎಂದು ಹೇಳುತ್ತಾರೆ. ಮಂಜೂರು ಆದಮೇಲೆ ಸೂಪರ್‌ವೈಸರ್‌ಗೆ 100ರಿಂದ 200 ರೂಪಾಯಿಗಳವರೆಗೆ ಲಂಚ ಕೊಡಬೇಕು. ಇಲ್ಲದಿದ್ದರೆ ಮುಂದಿನ ಕೆಲಸವಾಗುವುದಿಲ್ಲ. ಲಂಚ ತೆಗೆದು ಕೊಳ್ಳದೆ ನಿಸ್ವಾರ್ಥತೆಯಿಂದ ಕೆಲಸ ಮಾಡುವ ಇರಾಖೆ ಎಂದರೆ ವಿದ್ಯುಚ್ಛಕ್ತಿ ಬೋರ್ಡ್ ಒಂದೇ ಎಂಬುದಾಗಿ ಈ ಬೋರ್ಡ್ ಮೊದಲು ಹೆಸರು ಪಡೆದಿತ್ತು. ಆದರೆ ಈಗ ಅಲ್ಲಿ ಲಂಚ ಎಂಬುದು ತಾಂಡವವಾಡುತ್ತಿದೆ. ಇಷ್ಟೊಂದು ಕಷ್ಟನಷ್ಟು ಒಂದು ಪಂಪ್‌ಸೆಟ್ಟು ಪಡೆದುಕೊಂಡರೆ ಅದು ಆಗಾಗ್ಗೆ ಕೆಟ್ಟುಹೋಗುತ್ತಿರುತ್ತದೆ. ಕೆಟ್ಟುಹೋಗಿದೆ, ಬಂದು ರಿಪೇರಿ ಮಾಡಬೇಕೆಂದು ಕಂಪ್ಲೈಂಟ್ ಕೊಟ್ಟರೆ ಈಗ ಲೈನ್‌ಮನ್ ಇಲ್ಲವೆಂದು ಹೇಳುತ್ತಾರೆ. ರಿಪೇರಿ ಮಾಡಲು 2-3 ದಿನ ತೆಗೆದುಕೊಳ್ಳುತ್ತಾರೆ. ಶ್ರೀಮಾನ್ ಚನ್ನಬಸಪ್ಪನವರು ಹೇಳಿದಂತೆ ಬೋರ್ಡಿನ ಚೇರ್‌ಮನ್ ಅವರಾದ ಶ್ರೀ ಅಪ್ಪ ಎಂಬುವರಿಗೆ 2,700 ರೂಪಾಯಿಗಳ ಸಂಬಳ ಕೊಡುತ್ತಿದ್ದೀರಿ. ಹಿಂದಿನ ಚೇರ್‌ಮನ್ ಅವರು ಕೇವಲ 700 ರೂಪಾಯಿಗಳ ಸಂಬಳ ತೆಗೆದುಕೊಳ್ಳುತ್ತಿದ್ದರು. ಈಗಿನವರು ರಿಟೈರ್ ಆಫೀಸರ್ ಬೇರೆ ಆಗಿದ್ದಾರೆ. ಅವರು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ. ಅವರನ್ನು ಪಾತನಾಡಿಸುವುದೇ ಕಷ್ಟವಾಗಿದೆ. ಈಗ ಬೋರ್ಡಿನಲ್ಲಿ ಕೆಲಸಮಾಡುತ್ತಿರುವ ಸುಮಾರು 25 ಸಾವಿರ ನೌಕರರಿಗೆ ಫ್ರೀ ಆಗಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಾ ಇದ್ದಾರೆ. ಫ್ರೀಯಾಗಿ ಒದಗಿಸುವುದನ್ನು ತಪ್ಪಿಸಿ ಅವರಿಗೆ ತಿಂಗಳಿಗೆ ಎರಡು ರೂಪಾಯಿಗಳಂತೆ ಚಾರ್ಜು ಮಾಡಿ ಎಂದು ಚೇರ್‌ಮನ್ ಅವರನ್ನು ಕೇಳಿದರೆ, ಅವರು ಇರುವ ರೂಲ್ಸನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಇವೆಲ್ಲ ಕಾರಣದಿಂದ ನಾನು ಬೋರ್ಡನ್ನು ಸೂಪರ್‌ಸೀಡ್ ಮಾಡ ಬೇಕೆಂದು ಹೇಳುತ್ತಿರುವುದು. ಅಲ್ಲಿಯ ನೌಕರರಿಗೆ ಫ್ರೀಯಾಗಿ ವಿದ್ಯುಚ್ಛಕ್ತಿ ಕೊಡಬೇಕೆಂದು ರೂಲ್ಸ್ ಇದ್ದರೆ ಅದನ್ನು ಬದಲಾವಣೆ ಮಾಡುವುದು ಏನು ಕಷ್ಟವಾಗುವುದಿಲ್ಲ. ನಾನು ಸರ್ಕಾರಕ್ಕೆ ಹೇಳುವುದು ಇಷ್ಟೆ, ಬೋರ್ಡಿನ ಆಡಳಿತವನ್ನು ಸರ್ಕಾರದವರೇ ತೆಗೆದುಕೊಂಡು ನಡೆಸಿದರೆ, ಈಗ ಆಗುತ್ತಿರುವ ದುರುಪಯೋಗವನ್ನು ಬಹಳಷ್ಟುಮಟ್ಟಿಗೆ ತಪ್ಪಿಸಬಹುದು. ಕೆಲವು ಜನ ಅಲ್ಲ ಸೇರಿ ಕೊಂಡು ಪಾರುಪತ್ಯ ನಡೆಸುತ್ತಿದ್ದಾರೆ. ಅಲ್ಲಿಯ ನೌಕರರಿಗೆ ಫ್ರೀ ವಿದ್ಯುಚ್ಛಕ್ತಿ, ಫ್ರೀ ಮನೆ, ಇಷ್ಟೆಲ್ಲಾ ಅನುಕೂಲಗಳನ್ನು ಅವರಿಗೆ ಕೊಟ್ಟು ಅದರ ಖರ್ಚನ್ನು ಇವತ್ತು ರೈತರಮೇಲೆ ಹಾಕುವುದಕ್ಕೆ ಹೊರಟಿದ್ದಾರೆ. ಅಲ್ಲಿಯ ನೌಕರರಿಗೆ ಫ್ರೀಯಾಗಿ ವಿದ್ಯುಚ್ಛಕ್ತಿ ಕೊಡುವ ಬದಲು ತಿಂಗಳಿಗೆ ಎರಡು ರೂಪಾಯಿಗಳಂತೆ ಚಾರ್ಜು ಮಾಡಿದರೆ ಎಷ್ಟೋ ಆದಾಯ ಬರುತ್ತದೆ. ಇದನ್ನು ಬಿಟ್ಟು ರೈತರಮೇಲೆ ಹೆಚ್ಚಿನ ರೇಟನ್ನು ಹಾಕುವುದು ಯಾವ ನ್ಯಾಯ. ಇವತ್ತು ಒಬ್ಬ ರೈತನಿಗೆ ಪಂಪ್ ಸೆಟ್ಟು ಕೊಟ್ಟರೆ, ಅದರ ಲಾಭ ಕೂಡಲೇ ಸಿಗುವುದಿಲ್ಲ. ಲಾಭ ಸಿಗುವುದು ಮುಂದಿನ ತಲೆಮಾರಿಗೆ ಎಂದು ಹೇಳಬಹುದು. ಒಂದು ವರ್ಷ ಮಳೆ ಇಲ್ಲದಿದ್ದರೆ ಬೆಳೆ ಹೋಗುತ್ತದೆ. ಆ ವರ್ಷ ಅವರ ಕಷ್ಟ ಹೇಳುವುದಕ್ಕಾಗುವುದಿಲ್ಲ. ಇಂಥಹವೆಲ್ಲಾ ಮೇಲೆ ಕರುಣೆ ಬೇಡವೇ ಎಂದು ಕೇಳುತ್ತೇನೆ. ಟ್ಯಾರಿಫ್ ಕಮಿಟಿಯವರು ದರದ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆಂದು ಸರ್ಕಾರದವರು ಹೇಳ ಬಹುದು. ಮಾನ್ಯ ಚೆನ್ನಬಸಪ್ಪನವರು ಹೇಳಿದಂತೆ ಆ ಕಮಿಟಿಯಲ್ಲಿ ಕನ್ಸ್ಯೂಮರ್ಸ್ ಕಡೆಯ ಪ್ರತಿನಿಧಿಗಳು ಇದ್ದರೆ ಒಳ್ಳೆಯದು ಎಂದು ಹೇಳುತ್ತೇನೆ. ಮತ್ತು ಆ ರೀತಿ ಕನ್ಸ್ಯೂಮರ್ಸ್ ಕಡೆಯ ಪ್ರತಿನಿಧಿಗಳನ್ನು ತೆಗೆದುಕೊಂಡು ದರವನ್ನು ನಿಗದಿ ಮಾಡುವುದು ಮಂಡಲಿಯ ಕರ್ತವ್ಯ ವೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ದರವನ್ನು ಒಬ್ಬೊಬ್ಬರಿಗೆ ಒಂದೊಂದು ರೀತಿ ವಿಧಿಸಿ ಬೋರ್ಡಿನವರು ಕರ್ತವ್ಯರೋಪ ಮಾಡಿದ್ದಾರೆಂದು ಹೇಳಬಹುದು. ಸಿನಿಮಾದವರಿಗೆ ಮತ್ತು ಹೋಟೆಲ್‌ನವರಿಗೆ ಕಡಿಮೆ ದರದಲ್ಲಿ ಒದಗಿಸಿ ಗೃಹಬಳಕೆಯವರಿಗೆ ಹೆಚ್ಚಿನ ದರವನ್ನು ವಿಧಿಸುತ್ತಿದ್ದಾರೆ. ಸಿನಿಮಾದವರಿಗೆ ವರಮಾನ ಜಾಸ್ತಿ ಇದೆ, ಅವರಿಗೆ ಏತಕ್ಕೆ ದರವನ್ನು ಹೆಚ್ಚು ಮಾಡ ಬಾರದು ಎಂದು ಕೇಳಿದರೆ, ಅವರಿಂದ ರಿಬೇಟ್ಸ್ ಹೆಚ್ಚು ಬರುವುದರಿಂದ ಅವರ ಮೇಲೆ ಹೆಚ್ಚಿನ ದರ ವನ್ನು ವಸೂಲ್ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಇವತ್ತಿನ ದಿವಸ ವಿದ್ಯುಚ್ಛಕ್ತಿಯನ್ನು

ಅತಿ ಕಡಿಮೆ ವೆಚ್ಚದಲ್ಲಿ ತಯಾರು ಮಾಡುತ್ತಿರುವುದು ಮೈಸೂರು ರಾಜ್ಯ ಒಂದೇ. ಈ ಕಾರಣದಿಂದ ಬೋರ್ಡಿಗೆ ಹೆಚ್ಚಿನ ಉತ್ಪತ್ತಿ ಇರಬೇಕು. ಆದರೆ ವಿದ್ಯುಚ್ಛಕ್ತಿ ಮಂಡಲಿಯವರಿಗೂ ಎಚ್.ಇ.ಪಿ. ಇಲಾಖೆಯವರಿಗೂ ಹೊಂದಾಣಿಕೆ ಇಲ್ಲದಿರುವುದರಿಂದ ನಷ್ಟವಾಗುವುದಕ್ಕೆ ಅವಕಾಶವಾಗಿದೆ. ಆ ನಷ್ಟವನ್ನು ತಪ್ಪಿಸಲು ಸಿಕ್ಕಾಪಟ್ಟೆ ದರವನ್ನು ಹೆಚ್ಚಿಸುತ್ತಿದ್ದಾರೆ.

ಚೇರ್‌ಮನ್‌ರವರು.—ತಾವು ನಾಳೆ ತಮ್ಮ ಭಾಷಣವನ್ನು ಮುಂದುವರೆಸಬಹುದು. ಸಭೆ ಇವತ್ತು ಎದ್ದು ನಾಳೆ ಒಂದು ಗಂಟೆಗೆ ಪುನಃ ಸೇರುತ್ತದೆ.

The House adjourned at Seven of the Clock to meet again at One of the Clock on Tuesday, the 2nd September 1969.

WD 13520—GPB—600—5-12-1969